ಕರ್ನಾಟಕ ಮಾಧ್ಯಮ ಅಕಾಡೆಮಿಯಿಂದ ಪುರಸ್ಕೃತ....

# ಸತ್ಯಾಶ್ರಯ

ಪ್ರಾದೇಶಿಕ ಕನ್ನಡ ದಿನ ಪತ್ರಿಕೆ
SATYASHRAYA REGIONAL KANNADA DAILY

ಸತ್ಯಕ್ಕೆ ಆಶ್ರಯ

ಸಂಪಾದಕ: ಆನಂದ ಎಸ್. ಜಿಗಜಿನ್ನಿ BSc.LLB
ಸಂಸ್ಥಾಪಕ ಸಂಪಾದಕರು: ಲಿಂ||ಶರಣಬಸವರಾಜ ಎಸ್. ಜಿಗಜಿನ್ನಿ

ವಿಜಯಪುರ, ಬೆಳಗಾವಿ, ಧಾರವಾಡ, ಗದಗ, ಕೊಪ್ಪಳ, ವಿಜಯನಗರ, ರಾಯಚೂರ, ಯಾದಗಿರಿ, ಹಾವೇರಿ ಜಿಲ್ಲೆಗಳಲ್ಲಿ ಪ್ರಸಾರಿತ.

E-mail: satyashraya@gmail.com
www. satyashrayanews.com
ಸಂಪುಟ : 35 VOLUME : 35
ಸಂಚಿಕೆ : 327 ISSUE : 327
ರವಿವಾರ SUNDAY
ದಿನಾಂಕ: 09-03-2025 Date: 09-03-2025
ಪುಟ : 08 PAGE : 08
KRN IV/36, RNI:50599/93
PMG KA/NK/362/03-05
9845167186,
7019500547

## ಬಿಜೆಪಿಯವರು ಸುಳ್ಳು ಹೇಳದೆ ಇನ್ನೇನು ಮಾಡಲು ಸಾಧ್ಯ: ಡಿಸಿಎಂ ಡಿ.ಕೆ.ಶಿವಕುಮಾರ್



ಬೆಂಗಳೂರು– ಸಿಎಂ ಸಿದ್ದರಾಮಯ್ಯ ಅವರು ದೇಶಕ್ಕೆ ಮಾದರಿ ಬಜೆಟ್ ಮಂಡನೆ ಮಾಡಿದ್ದು, ಬಿಜೆಪಿಯವರು ಇದರ ಬಗ್ಗೆ ಸುಳ್ಳು ಹೇಳದೆ ಇನ್ನೇನು ಮಾಡಲು ಸಾಧ್ಯ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಶ್ನಿಸಿದ್ದಾರೆ. ಬಿಜೆಪಿಯವರು ಹಲಾಲ್ ಬಜೆಟ್ ಟೀಕೆಗೆ ಪ್ರತಿಕ್ರಿಯಿಸಿದ ಅವರು, ಪಾಪ ಅವರಾದರೂ ಏನು ಮಾಡುತ್ತಾರೆ.

ಈ ರೀತಿ ಹೇಳುವುದು ಬಿಟ್ಟರೆ ಇನ್ನೇನು ಮಾಡಲು ಸಾಧ್ಯ ಎಂದು ವ್ಯಂಗ್ಯವಾಡಿದರು.

ಸಿಎಂ ಸಿದ್ದರಾಮಯ್ಯ ಅವರು ಐತಿಹಾಸಿಕ ಹಾಗೂ ದೇಶಕ್ಕೆ ಮಾದರಿ ಬಜೆಟ್ ಕೊಟ್ಟಿದ್ದಾರೆ. ಮುಂದೆ ಬೇರೆ ಬೇರೆ ರಾಜ್ಯಗಳು ನಮ್ಮ ಬಜೆಟ್ ಪಾಲನೆ ಮಾಡಲಿವೆ.

ಈ ಬಜೆಟ್ ಸಮಾಜದ ಎಲ್ಲಾ ವರ್ಗದವರಿಗಾಗಿ ಮಾಡಿರುವ ಬಜೆಟ್. ಈ ಆಯವ್ಯಯ ಮಂಡಿಸಿರುವ ಮುಖ್ಯಮಂತ್ರಿಗಳಿಗೆ ಹಾಗೂ ಇದಕ್ಕೆ ಸಹಕಾರ ಕೊಟ್ಟ ನನ್ನ ಸಹೋದ್ಯೋಗಿಗಳಿಗೆ ಧನ್ಯವಾದ ತಿಳಿಸುತ್ತೇನೆ ಎಂದರು.

ಬ್ರ್ಯಾಂಡ್ ಬೆಂಗಳೂರು ಜಾರಿ: ಬಜೆಟ್‌ನಲ್ಲಿ ಬ್ರ್ಯಾಂಡ್ ಬೆಂಗಳೂರಿನ ಮಹತ್ವದ ಯೋಜನೆಗಳಿಗೆ ಅನುದಾನ ನೀಡಲಾಗಿದೆ. ರಾಜಧಾನಿಯಲ್ಲಿರುವ 1.40 ಕೋಟಿ ಜನರಿಗೆ ಅನುಕೂಲವಾಗಲಿದೆ. ಟನಲ್ ರಸ್ತೆ ಆಗಿಯೇ ಆಗುತ್ತದೆ. ಮುಂಬರುವ ಎಲ್ಲಾ ಮೆಟ್ರೋ ಮಾರ್ಗಗಳಲ್ಲಿ ಡಬಲ್ ಡೆಕ್ಕರ್ ಮೇಲ್ಸೇತುವೆ ಮಾಡಲಾಗುವುದು.

ಪಾಲಿಕೆ ಹಾಗೂ ಬಿಎಂಆರ್ ಸಿಎಲ್ ಇದರ ವೆಚ್ಚವನ್ನು 50:50 ಅನುಪಾತದಲ್ಲಿ ಭರಿಸಲಿವೆ. ರಾಜಕಾಲುವೆ ಅಕ್ಕಪಕ್ಕದಲ್ಲಿ 50 ಅಡಿ ಬಫರ್ ವಲಯದಲ್ಲಿ 300 ಕಿ.ಮೀ ಉದ್ದದಷ್ಟು ರಸ್ತೆ ನಿರ್ಮಾಣ ಮಾಡಲಾಗುವುದು. ಈ ಯೋಜನೆಗೆ 3 ಸಾವಿರ ಕೋಟಿ ಮೀಸಲಿಡಲಾಗಿದೆ. ಬಫರ್ ರಸ್ತೆ, ಮೇಲ್ಸೇತುವೆ, ಟನಲ್ ರಸ್ತೆಗಳ ಮೂಲಕ ಬೆಂಗಳೂರಲ್ಲಿ 700–800 ಕಿ.ಮೀ ಉದ್ದದಷ್ಟು ಹೊಸ ರಸ್ತೆ ನಿರ್ಮಾಣ ಮಾಡುತ್ತಿದ್ದೇವೆ. ಬೆಂಗಳೂರಿನ ಅಭಿವೃದ್ಧಿಗೆ ಇನ್ನೇನು ಆಲೋಚನೆ ಮಾಡಲು ಸಾಧ್ಯ? ಜನರ ಸಮಸ್ಯೆಗೆ ಪರಿಹಾರ ನೀಡಲು ಸರ್ಕಾರ ಸಾಲ ಮಾಡಿಯಾದರೂ ಈ ಯೋಜನೆ ಮಾಡುತ್ತೇವೆ. ಇಡೀ ವಿಶ್ವ ಬೆಂಗಳೂರಿನತ್ತ ತಿರುಗಿ ನೋಡುತ್ತಿದ್ದು, ಈ ನಗರಕ್ಕೆ ನಮ್ಮ ಸರ್ಕಾರ ಆದ್ಯತೆ ನೀಡಿದೆ ಎಂದು ತಿಳಿಸಿದರು.

ಮನಮೋಹನ್ ಸಿಂಗ್ ಅವರಿಗೆ ಇನ್ನಷ್ಟು ಮಾನ್ಯತೆ ನೀಡಬೇಕು: ಬೆಂಗಳೂರು ವಿವಿಗೆ ಮನಮೋಹನ್ ಸಿಂಗ್ ಹೆಸರು ಇಟ್ಟಿರುವ ಕುರಿತು ಉತ್ತರಿಸಿದ ಅವರು, ಅವರು ದೀನದಯಾಳ್ ಹೆಸರು ಇಡುವಾಗ ನಾವು ಮನಮೋಹನ್ ಸಿಂಗ್ ಹೆಸರು ಇಡಬಾರದೆ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೋಗುವ ಮೇಲ್ಸೇತುವೆ, ಎಲೆಕ್ಟ್ರಾನಿಕ್ ಸಿಟಿ ಮೇಲ್ಸೇತುವೆ, ನೆಲಮಂಗಲ ಮೇಲ್ಸೇತುವೆ.

*ಮದ್ಯ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮ ಕುರಿತು *ವಿಚಾರ ಸಂಕಿರಣ, ಪ್ರಹಸನ ಹಾಗೂ ಜಾಗೃತಿ ಕಾರ್ಯಕ್ರಮ

## ಮಾದಕ ವ್ಯಸನದ ವಿರುದ್ಧ ರಾಯಬಾರಿಗಳಾಗಿ: ಡಿಸಿ ಜಾನಕಿ



ಬಾಗಲಕೋಟೆ– ಮದ್ಯ ಮತ್ತು ಮಾದಕ ವಸ್ತುಗಳ ವ್ಯಸನಗಳ ವಿರುದ್ಧದ ಹೋರಾಟದಲ್ಲಿ ರಾಯಬಾರಿಗಳಾಗಿ ಕೆಲಸ ಮಾಡಿ ಉತ್ತಮ ಸಮಾಜ ಕಟ್ಟಲು ಮುಂದಾಗಬೇಕು ಎಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ತೋವಿವಿಯ ರೈತ ವಿಕಾಸ ಭವನದಲ್ಲಿ ಶನಿವಾರ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ತೋಟಗಾರಿಕೆ ಮಹಾವಿದ್ಯಾಲಯದ ಸಹಯೋಗದಲ್ಲಿ ಹಮ್ಮಿಕೊಂಡ ಮದ್ಯ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮ ಕುರಿತು ವಿಚಾರ ಸಂಕಿರಣ, ನಾಟಕ ಹಾಗೂ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಮಾದಕ ವ್ಯಸನಿಗೆ ತುತ್ತಾದಲ್ಲಿ ಕೌಟುಂಬಿಕ ವ್ಯವಸ್ಥೆ ಹಾಳಾಗುವದರ ಜೊತೆಗೆ ಸಮಾಜದ ಮೇಲೆ ಕೆಟ್ಟ ಪರಿಣಾಮ ಬೀರಲಿದೆ ಎಂದರು.

ಮದ್ಯ ಮತ್ತು ಮಾದಕ ವ್ಯಸನದಿಂದ ಉಂಟಾಗುವ ಪರಿಣಾಮಗಳ ಬಗ್ಗೆ ತಿಳುವಳಿಕೆ ಮೂಡಿಸಬೇಕಿದೆ. ಇಲ್ಲವಾದಲ್ಲಿ ಕುಟುಂಬದ ಜೊತೆಗೆ ಸಮಾಜದ ಮೇಲೆ ಪರಿಣಾಮ ಬೀರುತ್ತದೆ. ನಿಮ್ಮಲ್ಲಿ ಜ್ಞಾನವಿದೆ. ಅಷ್ಟನ್ನು ಬಳಸಿಕೊಂಡು ಮಾದಕ ವಸ್ತುಗಳಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಬೇಕು. ದೊಡ್ಡವರು ತಪ್ಪು ಮಾಡಿದಾಗ ಸಣ್ಣವರು ಹೇಗೆ ಬುದ್ದಿ ಹೇಳುವುದು ಅಂತ ತಿಳಿಯಬಾರದು. ಸರಿ ತಪ್ಪುಗಳನ್ನು ಹೇಳುವಲ್ಲಿ ದೊಡ್ಡವರು ಸಣ್ಣವರು ಅಂತ ಇಲ್ಲ. ಸುಂದರ, ಬಲಿಷ್ಟ ಸಮಾಜ ನಿರ್ಮಾಣದಲ್ಲಿ ತಮ್ಮ ಪಾತ್ರ ಮಹತ್ವವಾಗಿದ್ದು, ಈ ಕಾರ್ಯಾಗಾರ ನಿಮಗೆ ಪ್ರೇರಣೆಯಾಗಲಿದೆ ಎಂದರು.

ಅತಿಥಿಗಳಾಗಿ ಆಗಮಿಸಿದ ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಡಾ.ಬಾಲಾಜಿ ಕುಲಕರ್ಣಿ ಮಾತನಾಡಿ ವ್ಯಸನಗಳಲ್ಲಿ ಒಳ್ಳೆಯ ಹಾಗೂ ಕೆಟ್ಟ ವ್ಯಸನಗಳಿವೆ. ಇವತ್ತಿನ ಕುಟುಂಬಗಳು ಬೀದಿಗೆ ಬರಲು ಕಾರಣ ಮದ್ಯಪಾನಿಗಳಿಂದ. ಇಂದಿನ ಯುವಕರು ವ್ಯಸನಿಗಳಿಗೆ ದಾಸರಾಗದೇ ಒಳ್ಳೇಯ ವಿದ್ಯಾರ್ಥಿಗಳಾಗಿ ಇಂತಹ ವ್ಯಸನಿಗಳಿಗೆ ತಿಳುವಳಿಕೆ ನೀಡಲು ರಾಯಬಾರಿಗಳಾಗಬೇಕು. ಬಲಿಷ್ಟ ಸಮಾಜ, ಬಲಿಷ್ಟ ರಾಷ್ಟ್ರ ನಿರ್ಮಾಣ ಮಾಡಲು ಸದೃಡ, ಮಾನಸಿಕವಾಗಿ ಬಲಿಷ್ಟವಾಗಬೇಕಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ತೋವಿವಿಯ ಕುಲಪತಿ ಡಾ.ವಿಷ್ಣು ವರ್ದನ ಮಾತನಾಡಿ ಇತ್ತೀಚಿನ ದಿನಗಳಲ್ಲಿ ಉನ್ನತ ಶಿಕ್ಷಣ ವಿದ್ಯಾರ್ಥಿಗಳೇ ಮಾದಕ ವ್ಯಸನಿಗಳಾಗುತ್ತಿದ್ದಾರೆ. ಇಂತಹ ವಿದ್ಯಾರ್ಥಿಗಳ ಪೋಷಕರು ಸಿರಿವಂತರಾಗಿದ್ದು, ನೈತಿಕತೆಯ ಪಾಠದ ಕೊರತೆಯಿಂದಾಗಿ ಮಕ್ಕಳ ಕಡೆ ಗಮನ ಹರಿಸದೇ ಇರುವದರಿಂದ ವ್ಯಸನಿಗಳಾಗುತ್ತಿದ್ದಾರೆ. ಅಲ್ಲದೇ ಸಹವಾಸ ದೋಷದಿಂದಲೂ ಸಹ ವಿದ್ಯಾರ್ಥಿಗಳು ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ಅತೀ ಹೆಚ್ಚು ಜಾನನಾಗಿದ್ದವನು ವ್ಯಸನಿಯಾಗಿದ್ದರೆ, ಶಿಕ್ಷಣಕ್ಕೂ ಅವನಿಗೂ ಅವನ ಕುಟುಂಬಕ್ಕೆ ಇದು ಮಾರಕವಾಗಿರುತ್ತದೆ. ಕುಟುಂಬದ ಒಬ್ಬ ವ್ಯಸನಿಯಿಂದ ಇಡೀ ಕುಟುಂಬ ಹಾಳಾಗುತ್ತದೆ ಎಂಬುದನ್ನು ವಿದ್ಯಾರ್ಥಿಗಳು ಅರಿತುಕೊಳ್ಳಬೇಕಿದೆ ಎಂದರು. ಎಸ್.ನಿಜಲಿಂಗಪ್ಪ ಮೆಡಿಕಲ್ ಕಾಲೇಜಿನ ಮನೋವೈದ್ಯಕೀಯ ಮುಖ್ಯಸ್ಥ ಡಾ.ನಾರಾಯಣ ಮುತಾಲಿಕ ಅವರು ಮದ್ಯ ಮತ್ತು ಮಾದಕ ವಸ್ತುಗಳಿಂದಾಗು ದುಷ್ಪಪರಿಣಾಮಗಳ ಬಗ್ಗೆ ಉಪನ್ಯಾಸ ಹಾಗೂ ಸಂವಾದ ನಡೆಸಿದರು.

## ಸಾಧನೆಗೆ ಯೋಜನಾಬದ್ಧ ಅಧ್ಯಯನ ಅವಶ್ಯ



ಚಿಮ್ಮಡ– ಕಠಿಣ ಪರಿಶ್ರಮದೊಂದಿಗೆ ಯೋಜನಾ ಬದ್ದವಾಗಿ ಅಧ್ಯಯನ ಮಾಡಿದರೆ ಉತ್ತಮ ಸಾಧನೆ ಮಾಡಬಹುದು ಎಂದು ಕ್ಷೇತ್ರ ನಿವೃತ್ತ ಶಿಕ್ಷಣಾಧಿಕಾರಿ ಸಿ.ಎಂ. ನೇಮಗೌಡ ಹೇಳಿದರು.

ಚಿಮ್ಮಡ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಗುರುವಾರ ಆಯೋಜಿಸಿದ್ದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಹಾಗೂ ಸತ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಪ್ರತಿಯೊಂದು ವಿಷಯದ ಕುರಿತು ತಿಳುವಳಿಕೆ ಮೂಡಿಸಿಕೊಳ್ಳಬೇಕು. ತಮಗೆ ಆಸಕ್ತಿ ಇರುವ ವಿಷಯದಲ್ಲಿ ಹೆಚ್ಚಿನ ಸಾಧನೆಗೆ ಮುಂದಾಗಬೇಕು. ಕಲಿಕೆಗೆ ಪೂರಕ ವಾತಾವರಣ ನಿರ್ಮಿಸಿಕೊಡುವಲ್ಲಿ ಪೋಷಕರ ಮತ್ತು ಶಿಕ್ಷಕರ ಸಹಕಾರ ಅಗತ್ಯವಿದೆ ಎಂದರು.

ಗ್ರಾಪಂ ಮಾಜಿ ಅಧ್ಯಕ್ಷ ಪ್ರಭು ನೇಸೂರ ಮಾತನಾಡಿ, ಸತತ ಅಧ್ಯಯನದ ಮೂಲಕ ಶೈಕ್ಷಣಿಕ ಜೀವನದಲ್ಲಿ ಮಹತ್ವದ ಘಟ್ಟವಾಗಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಬೇಕು ಎಂದರು.

ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ಎಂ.ಎಸ್. ಜಿಟ್ಟಿ ಅಧ್ಯಕ್ಷತೆ ವಹಿಸಿದ್ದರು. ಸಿಆರ್‌ಪಿ ಸಮನ್ವಯ ಅಧಿಕಾರಿ ದಾಕ್ಷಾಯಿಣಿ ಮಂಡಿ, ಶಿಕ್ಷಕ ಡಿ.ಬಿ. ಬಡಿಗೇರ, ಜಿ.ಎಸ್. ಕುಲಕರ್ಣಿ ಮಾತನಾಡಿದರು. ಇತ್ತೀಚೆಗೆ ವರ್ಗಾವಣೆಗೊಂಡ ಶಿಕ್ಷಕಿ ಟಿ.ವಿ. ವೀರಗೌಡರ ಅವರನ್ನು ಸತ್ಕರಿಸಿ ಬೀಳ್ಕೊಡಲಾಯಿತು.

ಎಸ್‌ಡಿಎಂಸಿ ಅಧ್ಯಕ್ಷ ಮಾರುತಿ ಮಮದಾಪೂರ, ಪ್ರಕಾಶ ಪಾಟೀಲ, ಉಪನ್ಯಾಸಕ ಎಚ್.ಎಂ. ಕುಂಬಾರ, ಮಹಾದೇವ ಪಾಲಭಾವಿ, ಪ್ರಭು ಆನ್ಯಾಗೋಳ, ಶಿವಪ್ಪಾ ದೊಡಮನಿ, ನಂದೇಶ ಬರಗಲ್, ಪತ್ರಕರ್ತ ಇಲಾಹಿ ಜಮಂಖಡಿ ಮತ್ತಿತರರಿದ್ದರು. ಶಿಕ್ಷಕ ಪಿ.ಬಿ. ಮುಧೋಳ ಸ್ವಾಗತಿಸಿದರು, ಉಷಾಬಾಬು ಕಟ್ಟಿಮನಿ ನಿರೂಪಿಸಿದರು ಹಾಗೂ ಎಂ.ಎಲ್. ಜಮಾದರ ವಂದಿಸಿದರು.

ಬಜೆಟ್ | ನೀರಾವರಿ ಇಲಾಖೆಗೆ 22,181 ಕೋಟಿ; ಕೃಷ್ಣಾ ಮೇಲ್ದಂಡೆ ಯೋಜನೆಗೆ ಎಷ್ಟು?

## ವೈದ್ಯಕೀಯ ಕಾಲೇಜು ಘೋಷಣೆ:ಕೈಗಾರಿಕೆಗೆ ಸಿಕ್ಕಿಲ್ಲ ಒತ್ತು



ಬಾಗಲಕೋಟೆ– ರಾಜ್ಯ ಸರ್ಕಾರವು ನೀರಾವರಿ ಇಲಾಖೆಗೆ 22,181 ಕೋಟಿ ಅನುದಾನ ನಿಗದಿ ಪಡಿಸಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯೊಂದಕ್ಕೇ ಇದಕ್ಕಿಂತ ಹೆಚ್ಚು ಅನುದಾನಕ್ಕೆ ಆಗ್ರಹಿಸಲಾಗಿತ್ತು. ಒಂದು ಲಕ್ಷ ಎಕರೆ ಭೂಸ್ವಾಧೀನ ಪಡಿಸಿಕೊಳ್ಳಬೇಕಿದೆ. 20 ಹಳ್ಳಿಗಳನ್ನು ಸ್ಥಳಾಂತರಿಸಬೇಕಿದೆ. ಆದರೆ, ನಿರೀಕ್ಷಿತ ಅನುದಾನ ದೊರೆಯುತ್ತಿಲ್ಲ.

ಕೃಷ್ಣಾ ಮೇಲ್ದಂಡೆ ಯೋಜನೆಗೆ ಬೇಕಾದ ಭೂಮಿಯನ್ನು ಒಂದೇ ಹಂತದಲ್ಲಿ ಸ್ವಾಧೀನ ಪಡಿಸಿಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್‌ನಲ್ಲಿ ಘೋಷಿಸಿದ್ದಾರೆ. ಆದರೆ, ಒಪ್ಪಂದ ಐತೀರ್ಪಿನ ಮೂಲಕ ಭೂಸ್ವಾಧೀನ ಪಡಿಸಿಕೊಳ್ಳಲಾಗುವುದು ಎಂದಿದ್ದಾರೆ. ಒಪ್ಪಂದದ ದರವೇ ನಿಗದಿಯಾಗಿಲ್ಲ.

ಬಿಜೆಪಿ ಸರ್ಕಾರವು ಒಣ ಭೂಮಿ ಪ್ರತಿ ಎಕರೆಗೆ 20 ಲಕ್ಷ, ನೀರಾವರಿ ಭೂಮಿಗೆ 24 ಲಕ್ಷ ನಿಗದಿ ಪಡಿಸಿತ್ತು. ಅದನ್ನು ಒಪ್ಪದೇ ಹೆಚ್ಚಿನ ಪರಿಹಾರಕ್ಕಾಗಿ 20 ಸಾವಿರಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಅವುಗಳ ಇತ್ಯರ್ಥಕ್ಕಾಗಿ ವಿಶೇಷ ತ್ವರಿತಗತಿ ನ್ಯಾಯಾಲಯ ಆರಂಭಿಸಲಾಗುವುದು ಎಂದು ಘೋಷಿಸಲಾಗಿದೆ.

ಬೆಳಗಾವಿಯ ಸುವರ್ಣ ಸೌಧದಲ್ಲಿ ಯುಕೆಪಿ ಹೋರಾಟಗಾರರ ಸಭೆಯಲ್ಲಿ ಶೀಘ್ರ ಒಪ್ಪಂದ ದರ ನಿಗದಿ ಮಾಡಲಾಗುವುದು ಎಂದು ಹೇಳಲಾಗಿತ್ತು. ಆದರೆ, ಇಲ್ಲಿಯವರೆಗೆ ದರ ನಿಗದಿಯಾಗಿಲ್ಲ.

ಬಾಗಲಕೋಟೆ ಜಿಲ್ಲೆಯ ಕೆರೂರ, ಭಗವತಿ, ಬೀಳಗಿ ತಾಲ್ಲೂಕಿನ ಹೆರಕಲ್ ಏತ ನೀರಾವರಿ (ದಕ್ಷಿಣ) ವಿಸ್ತರಣೆ ಯೋಜನೆ, ಮೆಳ್ಳಿಗೇರಿ–ಹಲಗಲಿ ನೀರಾವರಿ ಯೋಜನೆ, ಅನವಾಲ ಏತ ನೀರಾವರಿ ಯೋಜನೆಗಳನ್ನು ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳಿಸುವುದಾಗಿ ಘೋಷಿಸಿರುವುದು ಜಿಲ್ಲೆಯ ರೈತರ ಪಾಲಿಗೆ ಸಿಕ್ಕಿರುವ ನೆಮ್ಮದಿ.

ರಾಮಥಾಳ, ತಿಮ್ಮಾಪುರ, ನಂದವಾಡಗಿ ನೀರಾವರಿ ಯೋಜನೆಗಳಿಗೆ ಕೇಂದ್ರ ಸರ್ಕಾರದ ಸಹಾಯಧನ ಪಡೆಯಲು ಪ್ರಸ್ತಾವ ಸಲ್ಲಿಸಲಾಗುವುದು ಎಂದು ತಿಳಿಸಲಾಗಿದೆ. ಇವು ವಿಳಂಬವಾಗುವ ಸಾಧ್ಯತೆಗಳಿವೆ.

ಈ ಹಿಂದೆ ಗುಳೇದಗುಡ್ಡ ಹಾಗೂ ರಬಕವಿ ಬನಹಟ್ಟಿಯಲ್ಲಿ ಜವಳಿ ಪಾರ್ಕ್ ಸ್ಥಾಪನೆ ಮಾಡಲಾಗುವುದಾಗಿ ಘೋಷಿಸಲಾಗಿತ್ತು.

## ಸ್ವ ಉದ್ಯೋಗದಿಂದ ಸಾಧನೆ ಸಾಧ್ಯ



ತೇರದಾಳ– ಸ್ವಾವಲಂಬಿ ಜೀವನ ನಡೆಸಲು ಕೇಂದ್ರ ಸರ್ಕಾರ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ಜಾರಿಗೊಳಿಸಿ ಬೀದಿ ಬದಿ ವ್ಯಾಪಾರ ನಡೆಸಲು ಸಹಾಯಧನ ನೀಡುತ್ತಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಆನಂದ ಕೆಸರಗೊಪ್ಪ ಹೇಳಿದರು.

ಪಟ್ಟಣದಲ್ಲಿ ಬೀದಿ ಬದಿ ವ್ಯಾಪಾರಸ್ಥರಿಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಗುರುವಾರ ಬೀದಿ ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರತಿಯೊಬ್ಬರು ನೌಕರಿಗಾಗಿ ಸಮಯ ವ್ಯರ್ಥ ಮಾಡದೇ, ಸ್ವ ಉದ್ಯೋಗದ ಮೂಲಕ ಸಾಧನೆ ಮಾಡಬಹುದಾಗಿದೆ. ಪುರಸಭೆ ವ್ಯಾಪ್ತಿಯಲ್ಲಿ ಇದುವರೆಗೆ 700ಕ್ಕೂ ಅಧಿಕ ಬೀದಿ ಬದಿ ವ್ಯಾಪಾರಸ್ಥರು ಯೋಜನೆ ಸದುಪಯೋಗ ಪಡೆದುಕೊಂಡಿದ್ದಾರೆ. ಈ ಯೋಜನೆಯಡಿ ಹತ್ತು ಸಾವಿರದಿಂದ ಹತ್ತು ಲಕ್ಷದವರೆಗೆ ಸಾಲ ಪಡೆದುಕೊಳ್ಳಬಹುದಾಗಿದೆ ಎಂದರು.

ಕಚೇರಿ ವ್ಯವಸ್ಥಾಪಕ ಮಲ್ಲಿಕಾರ್ಜುನ ಬಿರಾದಾರ ಪಾಟೀಲ, ಯೋಜನಾಧಿಕಾರಿ ಪಿ.ಪಿ. ನೀಲಕಂಠಮಠ, ಗೌರಿ ಮಾಲಾಪುರ, ಮತ್ತಿತರರಿದ್ದರು.

## ಶಿಕ್ಷಣದ ಜತೆ ಸಂಸ್ಕಾರ ಮೈಗೂಡಿಸಿಕೊಳ್ಳಿ: ಎಸ್.ಜಿ. ಆನಂದಪ್ಪನವರು



ಹುನಗುಂದ– ವಿದ್ಯಾರ್ಥಿಗಳು ಶಿಕ್ಷಣದ ಜತೆಗೆ ಸಂಸ್ಕಾರವನ್ನು ಮೈಗೂಡಿಸಿಕೊಳ್ಳಬೇಕು ಎಂದು ನಿವೃತ್ತ ಶಿಕ್ಷಕ ಎಸ್.ಜಿ. ಆನಂದಪ್ಪನವರು ಹೇಳಿದರು.

ಪಟ್ಟಣದ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ಆಯೋಜಿಸಿದ್ದ 7ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಹಾಗೂ ಸತ್ಕಾರ ಸಮಾರಂಭದಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳ ಕಲಿಕೆಗೆ ಪೂರಕ ವಾತಾವರಣ ನಿರ್ಮಾಣವಾಗಿದ್ದು, ಪರಿಶ್ರಮದಿಂದ ಓದಿ ಗುರಿ ತಲುಪಬೇಕು ಎಂದರು.

ರಾಷ್ಟ್ರ ಪ್ರಶಸ್ತಿ ವಿಜೇತ ನಿವೃತ್ತ ಶಿಕ್ಷಕ ನಿಂಗಪ್ಪ ಮೆಣಸಿನಕಾಯಿ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಶಿಕ್ಷಣ ಜತೆಗೆ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಿದಾಗ ಮಾತ್ರ ಯಶಸ್ಸು ಸಾಧಿಸಲು ಸಾಧ್ಯ ಎಂದರು.

ಮುಖ್ಯಶಿಕ್ಷಕ ಬಸವರಾಜ ಭಜಂತ್ರಿ ಶಾಲೆಯಲ್ಲಿ ಆಯೋಜಿಸಿದ್ದ ಶೈಕ್ಷಣಿಕ ಕಾರ್ಯಕ್ರಮಗಳ ವಿವರ ನೀಡಿದರು.

ಗ್ರಾಪಂ ಅಧ್ಯಕ್ಷೆ ಹುಲಗವ್ವ ಮಾದರ ಉದ್ಘಾಟಿಸಿದರು. ಎಸ್‌ಡಿಎಂಸಿ ಅಧ್ಯಕ್ಷ ಸಂಗಪ್ಪ ಸಿಂಗಾಡಿ ಅಧ್ಯಕ್ಷತೆ ವಹಿಸಿದ್ದರು. ಗಂಗಮ್ಮ ಹುಚನೂರ, ಅಂದನಗೌಡ ಗೌಡರ, ಗುರಪ್ಪ ಹುಚನೂರ, ಮತ್ತಿತರರಿದ್ದರು.

## ಶಿಕ್ಷಕ ಸ್ಥಾನಕ್ಕಿಂತ ಮೀಗಿಲಾದದ್ದು ಯಾವದಿಲ್ಲಾ:ಸಿದ್ದಲಿಂಗಶ್ರೀ



ತಾಳಿಕೋಟೆ- ಶಿಕ್ಷಕ ಎಂಬ ವೃತ್ತಿ ಜೀವನವು ಈ ಹಿಂದಿನ ಕಾಲದಿಂದಲೂ ಸಾಗಿಬಂದಿದೆ ಈ ವೃತ್ತಿಗಿಂತ ಮಿಗಿಲಾದಂತಹ ವೃತ್ತಿಗಳಿದ್ದರೂ ಸಹ ಅವುಗಳಿಗೆ ಶಿಕ್ಷಣ ನೀಡಿ ಆ ಸ್ಥಾನಮಾನವನ್ನು ಕಲ್ಪಿಸುವಂತಹ ಶಕ್ತಿ ಶಿಕ್ಷಕ ಎಂಬ ಸ್ಥಾನಮಾನಕ್ಕಿದೆ ಎಂದು ಶ್ರೀ ಖಾಸ್ಗತೇಶ್ವರ ಮಠದ ಬಾಲಶಿವಯೋಗಿ ಶ್ರೀ ಸಿದ್ದಲಿಂಗ ದೇವರು ನುಡಿದರು.

ಗುರುವಾರರಂದು ಸ್ಥಳೀಯ ಶ್ರೀ ಖಾಸ್ಗತೇಶ್ವರ ಶಿಕ್ಷಣ ಮಹಾವಿದ್ಯಾಲಯದ ಬಿಇಡಿ ಪ್ರಥಮ ವರ್ಷದ ಶಿಕ್ಷಕ ವಿದ್ಯಾರ್ಥಿಗಳ ಸ್ವಾಗತ ಹಾಗೂ 2024-25ನೇ ಸಾಲಿನ ಶಿಕ್ಷಕ ವಿದ್ಯಾರ್ಥಿ ಒಕ್ಕೂಟದ ಉದ್ಘಾಟನಾ ಸಮಾರಂಭದಲ್ಲಿ ದಿವ್ಯ ಸಾನಿದ್ಯ ವಹಿಸಿ ಸನ್ಮಾನ ಸ್ವಿಕರಿಸಿ ಮಾತನಾಡುತ್ತಿದ್ದ ಶ್ರೀಗಳು ಸಾಧನೆ ಎಂಬುದು ಸಾದಿಸಿದರೆ ಮಾತ್ರ ಒಲುಮೆಯಾಗಲಿದೆ.

ಆ ಒಲುಮೆಯನ್ನು ಯಾವ ರೀತಿ ಪಡೆಯಬೇಕೆಂಬುದನ್ನು ಅರ್ಥೈಸಿ ಹೇಳುವ ಕಾರ್ಯ ಶಿಕ್ಷಕ ಆದವನು ಮಾಡುತ್ತಾನೆಂದರು. ಕ್ರೀಕೇಟ್ ಆಟಗಾರ ವೀರಾಟ್ ಕೋಹ್ಲಿ ಎಂಬವ ರಾಷ್ಟ್ರ ಮಟ್ಟದ ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದಾಗ ಆತನಿಗೆ ತಂದೆ ಮೃತಪಟ್ಟ ಸುದ್ದಿ ಆಟವಾಡುವ ಸಮಯದಲ್ಲಿ ಕೇಳಿ ಬರುತ್ತದೆ

ಇದನ್ನು ಹೇಗೋ ಅರೀತ ಈ ಕೋಹ್ಲಿಯು ಗುರು ಎಂಬಾತ ಕೋಹ್ಲಿ ಅವನಿಗೆ ತಿಳಿ ಹೇಳಿ ನಿನ್ನ ತಂದೆಯ ಹೆಸರನ್ನು ತೆಗೆದು ಕೊಂಡು ಆಟವಾಡು ನೀನು ಜಯ ಗಳಿಸುತ್ತಿ ಎಂಬ ಮಾತನ್ನು ಆಲಿಸಿದ ಕೋಹ್ಲಿ ತಂದೆ ಮೃತಪಟ್ಟ ಸುದ್ದಿಯನ್ನು ಅರೀ ತರೂ ಕೂಡಾ ಲಕ್ಷಾಂತರ ಜನ ಆಟ ವಿಕ್ಷೀಸುತ್ತಿರುವವರಿಗೆ ತೊಂದರೆಯಾಗಬಾರದೆಂಬ ಉದ್ದೇಶ ಹೊತ್ತು ಆಟವಾಡಿ ದೇಶಕ್ಕೆ ಜಯ ತಂದುಕೊಟ್ಟ ಆತನ ಇತಿಹಾಸ ಇನ್ನೂ ಅಜರಾಮರವಾಗಿ ಉಳಿಯುವಂತಾಗಿದೆ ಎಂದು ಹೇಳಿದ ಶ್ರೀಗಳು ಮಾಡಿದರೆ ಅಂತಹ ಸಾಧನೆಯನ್ನು ಮಾಡಿ ಎಂದು ಶಿಕ್ಷಕ ವಿದ್ಯಾರ್ಥಿ ಗಳಿಗೆ ಸಲಹೆ ನೀಡಿದ ಶ್ರೀಗಳು ಶಿಕ್ಷಕ ಹೇಗೆ ಇರಲಿ ಆತನಿಗೆ ಒಳ್ಳೆಯವ ಕೆಟ್ಟವನವ ಎಂಬ ಹೆಸರು ತರುವ ಕೆಲಸ ವಿದ್ಯಾ ರ್ಥಿಯಾದವರ ಕೈಯಲ್ಲಿದೆ ಎಂದು ಕೆಲವು ವಿಷಯಗಳನ್ನು ವಿವರಿಸಿದ ಶ್ರೀಗಳು ಇಡೀ ದೇಶ ವನ್ನು ರಕ್ಷೀಸುವ ಸಾಮರ್ಥ್ಯ ಶಿಕ್ಷಕ ಎಂಬ ಸ್ಥಾನಮಾನದಲ್ಲಿದೆ ಕಾರಣ ಅದನ್ನು ತಾಚಾರ ಮನೋಭಾವನೆಯಿಂದ ಕಾಣದೇ ಅದರ ಸ್ಥಾನ ಮಾನಕ್ಕೆ ತಕ್ಕಂತೆ ಕಾರ್ಯ ನಿರ್ವಹಿಸಿರಿ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ವಿಜಯಪುರದ ಸಹ ಶಿಕ್ಷಕ ಹಾಗೂ ಸಾಹಿತಿಗಳಾದ ಡಾ.ಮಾದವ ಎಚ್. ಗುಡಿ ಅವರು ಮಾತನಾಡಿ ಮಾನವರಾಗಿ ಹುಟ್ಟಿದ ಮೇಲೆ ಯಾವುದಾದರೊಂದು ಸಾಧನೆ ಮಾಡಬೇಕು ಎಲ್ಲ ಸಾಧನೆಗಳಲ್ಲಿ ಹೆಚ್ಚಿನ ಸಾಧನೆ ಎಂದು ಮಹತ್ವ ಪಡೆದಿರುವ ಶಿಕ್ಷಕ ವೃತ್ತಿ ಎಂಬ ಸಾಧನೆಯಾಗಿದ್ದು ಆ ಸಾಧನೆಯನ್ನು ಆಯ್ಕೆ ಮಾಡಿಕೊಂಡು ನಡೆದರೆ ಉನ್ನತ ಸ್ಥಾನಮಾನದ ಮೇಟ್ಟಿಲು ಏರಲು ಸಾಧ್ಯವಾಗಲಿದೆ ಎಂದರು. ಶಿಕ್ಷಕರಿಗೆ ಇರತಕ್ಕಂತಹ ಗೌರವ ಮತ್ಯಾರಿಗೂ ಇಲ್ಲಾ ಶಿಕ್ಷಕನಾದವ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರ ನೀಡುವಂತಹ ಸಾಮಾರ್ಥ್ಯ ಇರಬೇಕೆಂದರು. ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರು ಮಕ್ಕಳ ಬಗ್ಗೆ ಇದ್ದ ಪ್ರೀತಿ ವಾತ್ಸಲ್ಯ ಕುರಿತು ತಿಳಿ ಹೇಳಿದ ಮಾದವ ಅವರು ಮಕ್ಕಳಿಗೆ ಬೆನ್ನು ತಟ್ಟಿ ಸ್ಪೂರ್ತಿ ನೀಡುವದರೊಂದಿಗೆ ಪ್ರೋತ್ಸಾಹಿಸುವಂತಹ ಕಾರ್ಯವಾಗಬೇಕೆಂದರು.

ಈ ಹಿಂದೆ ಡಿಎಡ್ ಎಂಬ ಕೋರ್ಸು 9 ತಿಂಗಳದ್ದಾಗಿತ್ತು ಪ್ರತಿಭಾ ಶಕ್ತಿ ಹೊಂದಿದವರು ಶಿಕ್ಷಕ ಸ್ಥಾನಮಾನ ಹೊಂದುತ್ತಾರೆಂಬ ಭಾವನೆ ಅಂದಿನಿಂದ ಇಂದಿನವರೆಗೂ ಇದೆ ಎಂದರು. ರಾಗಬದ್ದವಾಗಿ ತಾಳಬದ್ದವಾಗಿ ಹಾಡನ್ನು ಹಾಡುತ್ತಿದ್ದ ಡಾ.ದಾ.ರಾ.ಬೇಂದ್ರೆ ಅವರನ್ನು ನೆನಪಿಸಿಕೊಂಡ ಅವರು ಅನ್ಯರಿಗೆ ಪ್ರೇರಣೆ ನೀಡುವಂತಹ ಕಾರ್ಯ ಬೇದ್ರೆ ಅವರು ಮಾಡಿದ್ದಾರೆಂದರು. ಅಂಜಿಕೆ ಅಳುಕ ಎಂಬುದು ಶಿಕ್ಷಕನಲ್ಲಿರಬಾರದು ನಾವು ಶಿಕ್ಷಕ ಸ್ಥಾನದಲ್ಲಿದ್ದೇವೆ ಎಂಬುದನ್ನು ಅರೀತುಕೊಳ್ಳಬೇಕೆಂದರು. ಯಾವ ರೀತಿ ಹೂವಿಗೆ ಸುವಾಸನೆ ಎಂಬುದು ಮುಖ್ಯವೋ ಆ ರೀತಿ ವ್ಯಕ್ತಿಗೆ ವ್ಯಕ್ತಿತ್ವ ಮುಖ್ಯ ಎಂಬ ಅರಿವಿನೊಂದಿಗೆ ಮುನ್ನಡೆಯಬೇಕು ಶಿಕ್ಷಣ ಮಾಡಲಿರುವ ಇಚ್ಚಾಶಕ್ತಿ ಎಂಬುದಕ್ಕೆ ಶಿಕ್ಷಕರಾದವರು ಅಳವಡಿಸಿಕೊಳ್ಳಲು ಮುಂದಾಗಬೇಕೆಂದು ಹೇಳಿದ ಅವರು ಅನೇಕ ಶಿಕ್ಷಣ ಸಂಸ್ಥೆಗಳು ಜನ್ಮ ತಾಳಿವೆ ಮಾದರಿಯ ಶಿಕ್ಷಣ ಸಂಸ್ಥೆಗಳಲ್ಲಿ ತಾಳಿಕೋಟೆಯ ವೀರಶೈವ ವಿದ್ಯಾವರ್ದಕ ಶಿಕ್ಷಣ ಸಂಸ್ಥೆ ಯೊಂದಾಗಿದೆ ಎಂದು ಹೇಳಿದ ಅವರು ಡಾ.ಡಿ.ವ್ಹಿ.ಗುಂಡಪ್ಪನವರು ಪತ್ರಕರ್ತರಾಗಿ ಯಾವುದೇ ಆಸೆ ಆಮಿಷ್ಯಗಳಿಗೆ ಒಳಗಾಗದೇ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರೊಂದಿಗೆ ಇದ್ದ ಒಡನಾಟ ಕುರಿತು ಹಾಗೂ ಪತ್ರಿಕೋಧ್ಯಮದಲ್ಲಿ ಪಾವಿತ್ರತೆಯನ್ನು ಕಾಪಾಡಿಕೊಂಡು ಸಾಗಿದ್ದರ ಕುರಿತು ವಿವರಿಸಿದ ಅವರು ಎಲ್ಲ ಹುದ್ದೆಗಳನ್ನು ಸೃಷ್ಠಿ ಮಾಡುವಂತಹ ಕಾರ್ಯ ಶಿಕ್ಷಕನಾದವನೇ ಮಾಡುತ್ತಾನೆ ಕಾರಣ ಆದರ್ಶ ಬಧುಕನ್ನು ತಂದೆ ತಾಯಿಯಂತೆ ರೂಪಿಸಿಕೊಂಡು ನಡೆಯಿರಿ ಎಂದು ಡಾ. ಮಾದವ್ ಅವರು ಶಿಕ್ಷಕ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಶಿಕ್ಷಕ ವಿದ್ಯಾರ್ಥಿಗಳಿಗೆ ಪ್ರಮಾಣ ವಚನ ಭೋದಿಸಿದ ಶ್ರೀ ಖಾಸ್ಗತೇಶ್ವರ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಆರ್.ಎಂ.ಭಂಟನೂರ ಅವರು ಮಹಾವಿದ್ಯಾಲಯದ ಪ್ರಾರಂಭವಾದುದ್ದರಿಂದ ಹಿಡಿದು ಪ್ರಸ್ಥುತ ಮಹಾ ವಿದ್ಯಾಲಯದಲ್ಲಿ ಅಧ್ಯಯನ ಮಾಡುತ್ತಿರುವಂತಹ ವಿದ್ಯಾರ್ಥಿಗಳ ಸಂಖ್ಯೆಯನ್ನು ವಿವರಿಸಿದರಲ್ಲದೇ ಆದರ್ಶ ಸ್ಥಾನಮಾನವನ್ನು ಹೊಂದಿರುವ ಶಿಕ್ಷಕ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಿಕೊಂಡಿದ್ದರು.

ವಿಜಯಪುರ । ಅಕ್ಕನ ಅಂಗಳದಲ್ಲಿ ಸಾಂಸ್ಕೃತಿಕ ಕಲರವ

## ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ



ವಿಜಯಪುರ- ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡಿರುವ ವೈವಿಧ್ಯಮಯ ಮಹಿಳಾ ಸಾಂಸ್ಕೃತಿಕ ಹಬ್ಬ ಅಕ್ಕನ ಅಂಗಳಕ್ಕೆ ಹೊಸ ಮೆರುಗು ನೀಡಿದೆ.

ವಿದ್ಯಾರ್ಥಿನಿಯರು ಅತ್ಯಂತ ಹುಮ್ಮಸ್ಸಿನಿಂದ ಸಾಂಸ್ಕೃತಿಕ ಕಾರ್ಯಕ್ರಮ, ಆಹಾರಮೇಳದಲ್ಲಿ ಭಾಗಿಯಾಗುವ ಮೂಲಕ ಕಾರ್ಯಕ್ರಮಗಳನ್ನು ಅರ್ಥಪೂರ್ಣಗೊಳಿಸಿದರು.

**ಜುಂಬಾ:** ಮಹಿಳಾ ದಿನಾಚರಣೆಯ ಪ್ರಯುಕ್ತ ಶುಕ್ರವಾರ ಜುಂಬಾ ನೃತ್ಯವನ್ನು ಆಯೋಜಿಸಲಾಗಿತ್ತು. ಈ ನೃತ್ಯದಲ್ಲಿ ಭಾಗಿಯಾದ ಸಾವಿರಾರು ವಿದ್ಯಾರ್ಥಿನಿಯರು ಎಲ್ಲರ ಗಮನ ಸೆಳೆದರು.

**ಸಾಂಸ್ಕೃತಿಕ ಸಂಭ್ರಮ:** ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನು ಸಾರುವ ಭರತ್ಯನಾಟ್ಯ, ಯೋಗ ನೃತ್ಯ, ಲಾವಣಿ, ಜಾನಪದ, ದೇಶಭಕ್ತಿ, ಹಾಸ್ಯ ನೃತ್ಯಗಳು ವಿವಿಧ ಬಗೆಯ ನೃತ್ಯಗಳಲ್ಲಿ ವಿದ್ಯಾರ್ಥಿನಿಯರು ಭಾಗಿಯಾಗಿದರು.

**ಸುಚಿ-ರುಚಿ ಆಹಾರ ಮೇಳ:** ವಿವಿಯ ಅಂಗಳದಲ್ಲಿ ಆಹಾರ ಮೇಳಕ್ಕೆ ವಿಶ್ವವಿದ್ಯಾಲಯದ ಹಂಗಾಮಿ ಕುಲಪತಿ ಪ್ರೊ. ಶಾಂತಾದೇವಿ ಟಿ. ಚಾಲನೆ ನೀಡಿದರು.

ಈ ಆಹಾರ ಮೇಳದಲ್ಲಿ ವಿದ್ಯಾರ್ಥಿನಿಯರು ತಮ್ಮ ಮಳಿಗೆಗಳನ್ನು ಹಾಕಿ, ತಂಪು ಲಿಂಬು ಪಾನಿಯ, ಮಸಾಲ ಮಜ್ಜಿಗೆ, ರಾಗಿ ಅಂಬಲಿ, ಫ್ರೂಟ್ ಸಲಾಡ್ ಸೇರಿದಂತೆ ವಿವಿಧ ಬಗೆಯ ಖಾದ್ಯಗಳನ್ನು ಮಾರಾಟಕ್ಕೆ ಇಟ್ಟಿದ್ದರು. ಆಹಾರ ಮಳಿಗೆಗಳಿಗೆ ಭೇಟಿ ನೀಡಿ ಹಲವಾರು ಜನರು ವಿವಿಧ ಬಗೆಯ ತಿಂಡಿ ಸವಿದು ಆನಂದಿಸಿದರು.

**ಮನಸೆಳೆದ ಮಳಿಗೆಗಳು:** ಪುಸ್ತಕ ಮಳಿಗೆ, ಬಟ್ಟೆ ಮಳಿಗೆ, ಆಭರಣ ಮಳಿಗೆಗಳು ಮಹಿಳೆಯರ ಕಣ್ಮನ ಸೆಳೆಯುವಂತಿದ್ದವು. ಮನೆಯ ಅಂದವನ್ನು ಹೆಚ್ಚಿಸುವುದರ ಜೊತೆಗೆ ಆರೋಗ್ಯವನ್ನು ವೃದ್ಧಿಸುವಲ್ಲಿ ಸಹಾಯಕಾರಿಯಾಗುವಂತಹ ಬಗೆಬಗೆಯ ಸಸಿಗಳನ್ನು ಕೂಡ ಈ ಮೇಳದಲ್ಲಿ ಇಡಲಾಗಿದ್ದು ವಿಶೇಷ.

## ಗೋದಾಮಿಗೆ ಆಕಸ್ಮಿಕ ಬೆಂಕಿ ಹಾನಿ



ಬಸವನ ಬಾಗೇವಾಡಿ- ಪಟ್ಟಣದ ಎಪಿಎಂಸಿಯಲ್ಲಿ ಗೋದಾಮಿಗೆ ಆಕಸ್ಮಿಕ ಬೆಂಕಿ ತಗಲಿದ ಪರಿಣಾಮ ದವಸ ಧಾನ್ಯ ಸುಟ್ಟು ಕರಕಲಾಗಿ ಹಾನಿ ಸಂಭವಿಸಿದೆ ಗುರುವಾರ ಬೆಳಿಗ್ಗೆ ವಾಯು ವ್ಯವಹಾರಕ್ಕೆ ತೆರಳಿದ ಜನರು ಗೋದಾಮಿಗೆ ಬೆಂಕಿ ತಗಳಿದ್ದನ್ನು ಗಮನಿಸಿ ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಿದ್ದಾರೆ,

ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ ಇಂಗಳೇಶ್ವರ ಗ್ರಾಮದ ಪ್ರಭು ಮಹದೇವಪ್ಪ ಡಿಗ್ಗಾವಿ ಎಂಬುವರಿಗೆ ಸೇರಿದ್ ಗೋಧಾಮು ಇದಾಗಿದ್ದು.

ಗೋದಾಮಿನಲ್ಲಿ 250 ಚೀಲ ತೊಗರಿ 150 ಚೀಲ ಮೆಕ್ಕೆಜೋಳ 50 ಚೀಲ ಕಡಲೆ 50 ಚೀಲ ಸಜ್ಜೆ ಚೀಲ ಸೇರಿದಂತೆ ದವಸ ಧಾನ್ಯ ತುಂಬಲು ಬಳಸುವ ಕಾಲಿ ಚೀಲ ತಡಪಾಲು ಸುಟ್ಟುದರಿಂದ ಅಂದಾಜು 10 ಲಕ್ಷ ಮೌಲ್ಯದ ವಸ್ತುಗಳಿಗೆ ಹಾನಿಯಾಗಿದೆ ಎಂದು ಪ್ರತ್ಯಕ್ಷ ದರ್ಶಿಗಳು ತಿಳಿಸಿದ್ದಾರೆ.

ಭಟ್ಟನಾ ಸ್ಥಳಕ್ಕೆ ತಹಶೀಲ್ದಾರ್ ವೈ ಎಸ್ ಸೋಮನಕಟ್ಟಿ ಭೇಟಿ ನೀಡಿ ಪರಿಶೀಲಿಸಿದ್ದಾರೆ.

## ಮಣ್ಣಿನ ಫಲವತ್ತತೆ ಹೆಚ್ಚಳಕ್ಕೆ ಸಾಂಪ್ರದಾಯಿಕ ಕೃಷಿ ಪದ್ಧತಿ ಬಳಸಲಿ



ಬೆಳಗಾವಿ: ಅಗ್ನಿಹೋತ್ರ ಮಾಡುವುದರಿಂದ ರೈತರಿಗೆ ಹೆಚ್ಚಿನ ಅನುಕೂಲವಾಗುವುದರ ಜತೆಗೆ ಬೀಜ ಸಂರಕ್ಷಣೆ, ಮಣ್ಣಿನ ಲವತ್ತತೆ ಹೆಚ್ಚಿಸುತ್ತದೆ. ರೈತರು ತಮ್ಮ ಆಧುನಿಕ ಕೃಷಿ ಪದ್ಧತಿ ಜತೆಗೆ ಸಾಂಪ್ರದಾಯಿಕವಾಗಿ ಬೆಳೆದು ಬಂದಿರುವ ಕೃಷಿ ಪದ್ಧತಿಗಳನ್ನು ಮುಂದುವರಿಸುವುದು ಅವಶ್ಯಕವಾಗಿದೆ ಎಂದು ಕೆವಿಕೆ ಹಿರಿಯ ವಿಜ್ಞಾನಿ ಡಾ.ಮಂಜುನಾಥ ಚೌರಡ್ಡಿ ಹೇಳಿದರು.

ಬೈಲಹೊಂಗಲ ತಾಲೂಕಿನ ಮತ್ತಿಕೊಪ್ಪ ಕೆಎಲ್‌ಇ ಸಂಸ್ಥೆಯ ಕೃಷಿ ವಿಜ್ಞಾನ ಕೇಂದ್ರ-ಐಸಿಎಆರ್, ಶ್ರೀಸಿದ್ಧಗಿರಿ ನೈಸರ್ಗಿಕ ಮತ್ತು ಸಾವಯವ ಕೃಷಿಕರ ಬಳಗ, ಧಾರವಾಡ ಗ್ರಾಮ ವಿಕಾಸ ಸೊಸೈಟಿ, ಮಂಗಳೂರು ಯೂನಿರ್ವಸಲ್ ನಾಲೇಜ್ ಟ್ರಸ್ಟ್ ಸಹಯೋಗದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಅಗ್ನಿಹೋತ್ರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿ, ರೈತರು ಸಾವಯವ ಕೃಷಿಗೆ ಹೊಂದಿಕೊಳ್ಳುವ ಪ್ರಯತ್ನ ಮಾಡಬೇಕು. ರಾಸಾಯನಿಕ ಗೊಬ್ಬರ, ಔಷಧ ಅತಿಯಾಗಿ ಬಳಕೆಗೆ ಅವಲಂಬನೆ ಆಗಬಾರದು. ನೈಸರ್ಗಿಕ ಗೊಬ್ಬರ ಹಾಕಿ ಬೆಳೆ ಬೆಳೆಯಲು ಆಸಕ್ತಿ ವಹಿಸಬೇಕು ಎಂದು ಸಲಹೆ ನೀಡಿದರು.

ಬೆಳಗಾವಿ ಆವೃತ್ತಿ ಸ್ಥಾನಿಕ ಸಂಪಾದಕ ಮಹೇಶ ವಿಜಾಪುರ ಮಾತನಾಡಿ, ಸದ್ಯದ ಪರಿಸ್ಥಿತಿ ಅಗ್ನಿಹೋತ್ರ ಮಾಡುವ ಅವಶ್ಯಕತೆ ಇದೆ. ನಮ್ಮ ಸುತ್ತಮುತ್ತಲಿನ ವಾತಾವರಣ ಶುದ್ಧವಾದರೆ ಮಾತ್ರ ನಾವೆಲ್ಲ ಆರೋಗ್ಯವಾಗಿರಲು ಸಾಧ್ಯ. ರೈತರು ಸಮಾಜ ಆರೋಗ್ಯ ರಕ್ಷಣೆಗೆ ಆದ್ಯತೆ ನೀಡಬೇಕು ಎಂದರು.

## ಅಭಿವೃದ್ಧಿಗೆ ಸರ್ಕಾರದಿಂದ ಅನುದಾನ ಬಿಡುಗಡೆ



ಚಿಕ್ಕೋಡಿ ಗ್ರಾಮೀಣ- ವಿಪ ಸದಸ್ಯ ಪ್ರಕಾಶ ಹುಕ್ಕೇರಿ ಹಾಗೂ ಶಾಸಕ ಗಣೇಶ ಹುಕ್ಕೇರಿಯವರ ಪ್ರಯತ್ನದಿಂದ ಯಕ್ಸಂಬಾ ಪಟ್ಟಣ ಪಂಚಾಯಿತಿ ಕಟ್ಟಡ ನಿರ್ಮಾಣ ಕಾಮಗಾರಿಗೆ ಸರ್ಕಾರದಿಂದ 2.5 ಕೋಟಿ ರೂ. ಅಲ್ಲದೇ ರಸ್ತೆ ನಿರ್ಮಾಣ, ಪೇವರ್ ಬ್ಲಾಕ್ ಅಳವಡಿಕೆ, ಸರ್ಕಾರಿ ಶಾಲಾ ಕಟ್ಟಡ ಸೇರಿ ಅನೇಕ ಅಭಿವೃದ್ಧಿ ಕಾಮಗಾರಿಗೆ ಅನುದಾನ ಮಂಜೂರಾಗಿದ್ದು, ಯಾವುದೇ ಬೇಧಭಾವವಿಲ್ಲದೆ ಪಟ್ಟಣದ ಅಭಿವೃದ್ಧಿಗೆ ಶ್ರಮಿಸಲಾಗುವುದು ಯಕ್ಸಂಬಾ ಪಟ್ಟಣ ಪಂಚಾಯಿತಿ ಅಧ್ಯಕ್ಷ ಸುನೀಲ ಸಪ್ತಸಾಗರೆ ಎಂದರು.

ತಾಲೂಕಿನ ಯಕ್ಸಂಬಾ ಪಟ್ಟಣದಲ್ಲಿ ಈಚೆಗೆ ಹಮ್ಮಿಕೊಂಡಿದ್ದ 2.5 ಕೋಟಿ ರೂ. ವೆಚ್ಚದ ಯಕ್ಸಂಬಾ ಪಟ್ಟಣ ಪಂಚಾಯಿತಿ ಬೃಹತ್ ಕಟ್ಟಡ ಕಾಮಗಾರಿಯ ಭೂಮಿಪೂಜೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬೃಹತ್ ಕಟ್ಟಡ ಕಾಮಗಾರಿಯ ಭೂಮಿಪೂಜೆಯನ್ನು ಶಾಸಕ ಗಣೇಶ ಹುಕ್ಕೇರಿ ಹಾಗೂ ವಿಪ ಸದಸ್ಯ ಪ್ರಕಾಶ ಹುಕ್ಕೇರಿ ನೆರವೇರಿಸಿದರು.

ಚಿಕ್ಕೋಡಿ ಜಿಲ್ಲಾ ಹೋರಾಟ ಸಮಿತಿ ಅಧ್ಯಕ್ಷ ಸಂಜು ಬಡಿಗೇರ, ಉಪಾಧ್ಯಕ್ಷೆ ಸುಜಾತಾ ಚಿತಳೆ, ಗ್ರಾಪಂ ಮಾಜಿ ಅಧ್ಯಕ್ಷ ಮಹಾದೇವ ರೇಂದಾಳೆ, ದಿಲೀಪ ದೇಸಾಯಿ, ಮಾಜಿ ತಾಪಂ ಸದಸ್ಯ ರಾಜೇಂದ್ರ ಕರಾಳೆ, ಪ್ರದೀಪ ಜಾಧವ, ಗುತ್ತಿಗೆದಾರ ಸಿ.ಎಂ.ಜೋನಿ, ಪಪಂ ಸದಸ್ಯರಾದ ಕಿರಣ ಮಾಳಿ, ರವೀಂದ್ರ ಮಾನೆ, ಶಿವಗೌಡ ಬಾವಚೆ, ಚಿದಾನಂದ ಬೆಳ್ಳಿ, ಉಮೇಶ ಸಾತ್ವರ, ಅಂಕುಶ ಖೋತ,

ಜಮ್ಮನಶಾ ಮಕಾನದಾರ, ರವೀಂದ್ರ ಖೋತ, ವಿಠ್ಠಲ ನಾಯಿಕ, ಸೈಹೀದಾ ಮುಲ್ಲಾ, ಪ್ರೇಮಾ ಮಾಳಗೆ, ರಾಜಶ್ರೀ ಮಗದುಮ್ಮ, ಸಂಗೀತಾ ಪವಾರ, ಶಾನಕ್ಕ ರಾಂಗೋಳೆ, ಮಹಾಲಿಂಗ ವಸದ, ಜ್ಯೋತಿ ಸಾತ್ವರ, ಮುನೀರ ದಾಡಿವಾಲೆ, ತಹಸೀಲ್ದಾರ್, ಚಿದಂಬರ ಕುಲಕರ್ಣಿ ಇತರರಿದ್ದರು.

## ಕಾರ್ಯಾಗಾರ ಆಯೋಜಿಸಿರುವುದು ಶ್ಲಾಘನೀಯ



ಬೆಳಗಾವಿ- ರಾಷ್ಟ್ರೀಯ ವೈದ್ಯಕೀಯ ಮಂಡಳಿಯು ಸಾಮರ್ಥ್ಯ ಆಧಾರಿತ ವೈದ್ಯಕೀಯ ಶಿಕ್ಷಣಕ್ಕಾಗಿ ಅಧ್ಯಾಪಕರ ತರಬೇತಿ ಕಾರ್ಯಕ್ರಮವನ್ನು ವೈದ್ಯಕೀಯ ಶಿಕ್ಷಣದ ಬೇಸಿಕ್ ಕೋರ್ಸ್ (ಬಿಸಿಎಂಇ) ಎಂದು ಪರಿಷ್ಕರಿಸಿದೆ. ಉತ್ತರ ಕರ್ನಾಟಕ, ದಕ್ಷಿಣ ಮಹಾರಾಷ್ಟ್ರ ಮತ್ತು ಗೋವಾದ 24 ವೈದ್ಯಕೀಯ ಕಾಲೇಜುಗಳ ಅಧ್ಯಾಪಕರಿಗೆ ಜೆಎನ್‌ಎಂಸಿಯಲ್ಲಿ ಕಾರ್ಯಾಗಾರ ಆಯೋಜಿಸಿದ್ದಕ್ಕಾಗಿ ವೈದ್ಯಕೀಯ ಶಿಕ್ಷಣ ಇಲಾಖೆಯ ತಂಡ ಅಭಿನಂದನಾರ್ಹ ಎಂದು ಜೆ.ಎನ್. ವೈದ್ಯಕೀಯ ಕಾಲೇಜಿನ ಉಪ ಪ್ರಾಚಾರ್ಯ ಡಾ. ರಾಜೇಶ್ ಪೊವಾರ ಹೇಳಿದರು.

ಬೆಳಗಾವಿಯ ಜೆ.ಎನ್. ವೈದ್ಯಕೀಯ ಕಾಲೇಜಿನಲ್ಲಿ ಕೆಎಚ್‌ಇಆರ್‌ನ ವೈದ್ಯಕೀಯ ಶಿಕ್ಷಣದ ಬೇಸಿಕ್ ಕೋರ್ಸ್ (ಬಿಸಿಎಂಇ) ಕುರಿತು ಆಯೋಜಿಸಿರುವ ಕಾರ್ಯಾಗಾರ ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.

2023ರ ಎನ್‌ಎಂಸಿ ನಿಯಮಗಳ ಪ್ರಕಾರ ಪದವಿಪೂರ್ವ ಸಾಮರ್ಥ್ಯ ಆಧಾರಿತ ವೈದ್ಯಕೀಯ ಶಿಕ್ಷಣದ ಕಾರ್ಯಾಗಾರದಲ್ಲಿ ವಿವಿಧ ಬೋಧನೆ-ಕಲಿಕೆಯ ವಿಧಾನ ಮತ್ತು ಮೌಲ್ಯಮಾಪನ ತತ್ತ್ವ ಚರ್ಚಿಸಲಾಗುವುದು ಎಂದರು.

ಗೋವಾ, ಮಹಾರಾಷ್ಟ್ರ ಮತ್ತು ಕರ್ನಾಟಕದ ವಿವಿಧ ವಿಶೇಷ 30 ಅಧ್ಯಾಪಕರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಡಾ.ಪದ್ಮಜಾ ವಾಳ್ವೇಕರ, ಡಾ.ಸುನೀತಾ ಪಾಟೀಲ, ಡಾ. ಜ್ಯೋತಿ ನಾಗಮೋತಿ, ಡಾ. ಜಯಶೀಲಾ ಬಾಗಿ, ಡಾ.ಶೀತಲ್ ಹರಕುಣಿ, ಡಾ.ನಯನಾ ಹಾಶೀಲಕರ್, ಡಾ.ಎಸ್.ಕೆ. ಸೈದಾಪುರ, ಡಾ.ಭಾಗ್ಯಶ್ರೀ ಹುನಗುಂದ, ಡಾ. ಶೀತಲ ಪಟ್ಟಣಶೆಟ್ಟಿ, ಡಾ. ಅನುಪಮಾ ಗುಡಪ್ಪನವರ, ಡಾ.ಶಮಾ ಬೆಲ್ಲದ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು. ಬಿಸಿಎಂಇ ಸಹ ಸಂಚಾಲಕಿ ಮತ್ತು ಉಸ್ತುವಾರಿ ಡಾ.ದೀಪ್ತಿ ಕಡೆಯಂಗಡಿ, ಎಂಇಯು ಸಂಯೋಜಕಿ ಡಾ. ಭಾಗ್ಯಶ್ರೀ ಹುನಗುಂದ ಸ್ವಾಗತಿಸಿದರು. ಸಂಯೋಜಕಿ ಡಾ.ರೂಪಾ ಬೆಲ್ಲದ ವೈದ್ಯಕೀಯ ಶಿಕ್ಷಣದಲ್ಲಿ ಅಡ್ವಾನ್ಸ್ ಕೋರ್ಸ್ ಬಗ್ಗೆ ವಿವರಿಸಿದರು.

## ರೈತರ ಅಭಿವೃದ್ಧಿಗೆ ಕೃಷಿ ಬಜಾರ ಕೇಂದ್ರ ಸ್ಥಾಪನೆ



ಮಾಂಜರಿ- ಕಬ್ಬು ಬೆಳೆಗಾರ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಚಿದಾನಂದ ಕೋರೆ ಅವರು ಸ್ಥಾಪಿಸಿದ ಚಿದಾನಂದ ಕೋರೆ ಸಹಕಾರಿ ಸಕ್ಕರೆ ಕಾರ್ಖಾನೆಯು, ನೀರಾವರಿ ಯೋಜನೆ, ಆರೋಗ್ಯ ಸೇವೆ ಮತ್ತು ರಾಸಾಯನಿಕ ಗೊಬ್ಬರ ಮತ್ತು ಇತರ ಉಪಕರಣಗಳು ಅಗ್ಗದ ದರದಲ್ಲಿ ಒದಗಿಸಲು ಕೃಷಿ ಬಜಾರ್ ಕೇಂದ್ರ ನಿರ್ಮಾಣ ಮಾಡಿದೆ. ರೈತರು ಕೃಷಿ ಬಜಾರ್ ಸೇವೆ ಪಡೆದು ಅಭಿವೃದ್ಧಿ ಹೊಂದಬೇಕು ಎಂದು ಕೆಎಲ್‌ಇ ಸಂಸ್ಥೆ ಕಾರ್ಯಾಧ್ಯಕ್ಷ ಡಾ.ಪ್ರಭಾಕರ ಕೋರೆ ಹೇಳಿದರು.

ಗೋಕಾಕ ತಾಲೂಕಿನ ಘಟಪ್ರಭಾ ಪಟ್ಟಣದಲ್ಲಿ ಚಿಕ್ಕೋಡಿಯ ಚಿದಾನಂದ ಕೋರೆ ಸಹಕಾರಿ ಸಕ್ಕರೆ ಕಾರ್ಖಾನೆ ಸಹಯೋಗದಲ್ಲಿ ಹೊಸದಾಗಿ ಸ್ಥಾಪಿಸಿರುವ ಕೃಷಿ ಬಜಾರ ಕೇಂದ್ರ ಮಂಗಳವಾರ ಉದ್ಘಾಟಿಸಿ ಮಾತನಾಡಿದರು.

ವಿಧಾನ ಪರಿಷತ್‌ನ ಮಾಜಿ ಸದಸ್ಯ ಮಹಾಂತೇಶ ಕವಟಗಿಮಠ ಮಾತನಾಡಿ, ನಮ್ಮ ಸಕ್ಕರೆ ಕಾರ್ಖಾನೆ ರೂವಾರಿ ಡಾ.ಪ್ರಭಾಕರ ಕೋರೆ ಹಾಗೂ ರಾಷ್ಟ್ರೀಯ ಸಕ್ಕರೆ ಕಾರ್ಖಾನೆಯ ಮಹಾಮಂಡಳಿಯ ಹೊಸದೆಹಲಿ ನಿರ್ದೇಶಕ ಅಮಿತ್ ಕೋರೆ ಅವರ ನೇತೃತ್ವದಲ್ಲಿ ಹಲವಾರು ಜನಪರ ಯೋಜನೆ ರೂಪಿಸಿ ಜಮೀನುಗಳಿಗೆ ನೀರಾವರಿ ಕಲ್ಪಿಸಲಾಗಿದೆ. ಈಗ ಇಲ್ಲಿನ ಕಬ್ಬು ಬೆಳೆಗಾರ ನೆರವಿನ ದೃಷ್ಟಿಯಿಂದ ಕೃಷಿ ಬಜಾರ ಸೇವಾ ಕೇಂದ್ರ ಪ್ರಾರಂಭಿಸಲಾಗಿದೆ ಎಂದು ಹೇಳಿದರು.

ಡಾ.ಪ್ರಭಾಕರ ಕೋರೆ, ಮಹಾಂತೇಶ ಕವಟಗಿಮಠ ಹಾಗೂ ಗಣ್ಯರನ್ನು ಸನ್ಮಾನಿಸಲಾಯಿತು. ಸಕ್ಕರೆ ಕಾರ್ಖಾನೆ ಅಧ್ಯಕ್ಷ ಮಲ್ಲಿಕಾರ್ಜುನ ಕೋರೆ, ನಿರ್ದೇಶಕ ಭರತೇಶ ಬನವಣಿ, ಅಜಿತರಾವ್ ದೇಸಾಯಿ, ಕೆಎಲ್‌ಇ ಸಂಸ್ಥೆಯ ನಿರ್ದೇಶಕ ಜಯಾನಂದ ಮುನವಳ್ಳಿ, ರಾಮಗೌಡ ಹುಕ್ಕೇರಿ, ಗೋಕಾಕ ಕೃಷಿ ಅಕಾರಿ ಎಸ್.ಬಿ. ಕರಜಗಿ, ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕ ಆರ್.ಬಿ.ಖಂಡಗಾವಿ ಇತರರಿದ್ದರು. ಕಾರ್ಖಾನೆಯ ಪ್ರಧಾನ ವ್ಯವಸ್ಥಾಪಕ ಎಂ.ಎಸ್. ಹಿರೇಮಠ ನಿರೂಪಿಸಿದರು.

# ಸಕ್ಕರೆ ಕಾರ್ಖಾನೆ ವ್ಯಾಪ್ತಿ ರಸ್ತೆ ಅಭಿವೃದ್ಧಿಗೆ 20 ಕೋಟಿ ರೂ.: ಸಚಿವ ಶಿವಾನಂದ ಪಾಟೀಲ



ವಿಜಯಪುರ– ಕಬ್ಬು ಬೆಳೆಗಾರರ ಹಿತರಕ್ಷಣೆ, ಸಕ್ಕರೆ ಉದ್ದಿಮೆಗಳ ಅಭಿವೃದ್ಧಿ, ನೇಕಾರರ ಪ್ರಗತಿಗೆ ಬಜೆಟ್ ನಲ್ಲಿ ಹಲವು ಉಪಕ್ರಮಗಳನ್ನು ಘೋಷಣೆ ಮಾಡಲಾಗಿದ್ದು, ನಿರೀಕ್ಷಿತ ಅಭಿವೃದ್ಧಿ ಸಾಧಿಸುವ ಆಶಾಭಾವನೆ ಇದೆ.

ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯ ರಸ್ತೆ ಅಭಿವೃದ್ಧಿಗೆ 20 ಕೋಟಿ ರೂ. ಒದಗಿಸಲಾಗಿದೆ. ಕಾರ್ಮಿಕರ ಕೊರತೆಯಿಂದ ಕಬ್ಬು ಕಟಾವು ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು 140ಕ್ಕೂ ಅಧಿಕಶುಗರ್‌ಕೇನ್ ಹಾರ್ವೆಸ್ಟ್ ಹಬ್‌ಗೆ 70 ಕೋಟಿ ರೂ. ಸಹಾಯಧನ ಒದಗಿಸಲಾಗಿದೆ. ಈ ಕ್ರಮ ಕಬ್ಬು ಕಟಾವು ಸಮಸ್ಯೆಗೆ ಪರಿಹಾರ ನೀಡಲಿದೆ ಎಂದು ಸಕ್ಕರೆ, ಕಬ್ಬು ಅಭಿವೃದ್ಧಿ, ಜವಳಿ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.

ಸಕ್ಕರೆ ಕಾರ್ಖಾನೆಗಳ ಸಹಯೋಗದೊಂದಿಗೆ ಬೆಳಗಾವಿ, ವಿಜಯಪುರ, ಬಾಗಲಕೋಟೆ, ಕಲಬುರಗಿ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಒಟ್ಟು ಸುಮಾರು ಮೂರು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಸಮಗ್ರ ಮಣ್ಣು ಮತ್ತುನೀರಿನ ನಿರ್ವಹಣೆ, ಸಮರ್ಪಕ ತ್ಯಾಜ್ಯ ನಿರ್ವಹಣೆ, ನೀರಿನ ಬಳಕೆ ಮತ್ತು ಸಮತೋಲನ ಪೋಷಕಾಂಶಗಳ ನಿರ್ವಹಣೆ ಮಾಡುವ ನಿರ್ಧಾರ ಯೋಗ್ಯವಾದುದು. ಹಾಗೆಯೇ ಜೈವಿಕ ಕೃಷಿ ಪರಿಕರ ಸ್ಟಾರ್ಟ್ ಅಪ್‌ಗಳು ಉತ್ಪಾದನೆ ಮಾಡುವ ಜೈವಿಕ ಪರಿಕರಗಳನ್ನು ರೈತ ಸಂಪರ್ಕ ಕೇಂದ್ರಗಳ ಮೂಲಕ ರೈತರಿಗೆ ಸೂಕ್ತ ದರದಲ್ಲಿ ಮಾರಾಟ ಮಾಡಲು ಉತ್ತೇಜಿಸುವ ಸರ್ಕಾರದ ಕ್ರಮ ಜೈವಿಕ ಕೃಷಿಕರಿಗೆ ಬಲ ನೀಡಲಿದೆ ಎಂದು ಆಶಿಸಿದ್ದಾರೆ.

ಬಜೆಟ್ ಬಗ್ಗೆ ಪ್ರತಿಕ್ರಿಯೆ ನೀಡಿರುವ ಸಚಿವರು, ರಾಜ್ಯದ ಸಕ್ಕರೆ ಕಾರ್ಖಾನೆಗಳು 2023–24ನೇ ಸಾಲಿನಲ್ಲಿ 585 ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸಿ 53 ಲಕ್ಷ ಮೆಟ್ರಿಕ್ ಟನ್ ಸಕ್ಕರೆ ಉತ್ಪಾದಿಸಿವೆ. ಈ ಅವಧಿಕಯಲ್ಲಿ ಎಲ್ಲ ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಗಾರರಿಗೆ ಪೂರ್ಣ ಬಿಲ್ ಪಾವತಿ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆ. ಇದು ಸಕ್ಕರೆ ಕಾರ್ಖಾನೆ ಇತಿಹಾಸದಲ್ಲಿ ಸಾಧನೆ ಎಂದರೆ ತಪ್ಪಾಗದು ಎಂದು ಸಕ್ಕರೆ ಸಚಿವರು ತಿಳಿಸಿದ್ದಾರೆ.

ನೇಕಾರರ ಜೀವನಮಟ್ಟ ಸುಧಾರಣೆಗೆ ಮತ್ತು ನೇಕಾರಿಕೆ ಉದ್ದಿಮೆ ಉತ್ತೇಜನಕ್ಕೆ ಈಗ ಪ್ರಗತಿಯಲ್ಲಿರುವ ಹಲವು ಯೋಜನೆಗಳನ್ನು ಒಗ್ಗೂಡಿಸಿ ನೇಕಾರರ ಪ್ಯಾಕೇಜ್ 2.0 ಘೋಷಣೆ ಮಾಡಲಾಗಿದೆ. ಜವಳಿ ಮತ್ತು ಸಿದ್ಧ ಉಡುಪು ಕ್ಷೇತ್ರದಲ್ಲಿ ಹೆಚ್ಚಿನ ಬಂಡವಾಳ ಆಕರ್ಷಿಸಿ ಸುಮಾರು 2 ಲಕ್ಷ ಉದ್ಯೋಗ ಸೃಷ್ಟಿಗೆ ನೂತನ ಜವಳಿ ನೀತಿ ರೂಪಿಸುವ ಘೋಷಣೆ ಮಾಡಿರುವುದು ಜವಳಿ ಕ್ಷೇತ್ರಕ್ಕೆ ಪುನಶ್ಚೇತನ ನೀಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಜಿಲ್ಲೆಯ ರಾಣೆಬೆನ್ನೂರು ಸೇರಿದಂತೆ ಹಲವು ಮಡೆ ಪಿಪಿಪಿ ಮಾದರಿಯಲ್ಲಿ ಜವಳಿ ಪಾರ್ಕ್ ನಿರ್ಮಾಣ ಮಾಡುವ ನಿರ್ಧಾರ ಉದ್ಯೋಗ ಸೃಜನೆಯೊಂದಿಗೆ ಆರ್ಥಿಕ ಪ್ರಗತಿ ಸಾಧನೆ ಮಾಡಲು ಸಹಾಯವಾಗಲಿದೆ. ಹಾವೇರಿ ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ನಮ್ಮ ಹಲವು ಬೇಡಿಕೆಗಳಿಗೆ ಬಜೆಟ್‌ನಲ್ಲಿ ಸಿಎಂ ಸಿದ್ದರಾಮಯ್ಯ ಅವರು ಆದ್ಯತೆ ನೀಡಿರುವುದು ಸಂತಸ ತಂದಿದೆ ಎಂದು ಅವರು ಹೇಳಿದ್ದಾರೆ. ಬ್ಯಾಡಗಿ ಮೆಣಸಿನಕಾಯಿ ತಳಿಯ ಸಂರಕ್ಷಣೆ ಮತ್ತು ಎಲೆಮುರುಟು ರೋಗ, ತ್ರಿಪ್ಸ್ ಇತ್ಯಾದಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಂಶೋಧನೆ ಕೈಗೊಳ್ಳುವ ನಿರ್ಧಾರ ಬ್ಯಾಡಗಿ ತಳಿಯ ಅಭಿವೃದ್ಧಿಗೆ ನೆರವಾಗಲಿದೆ . ದೇಶಿ ತಳಿಗಳ ಬೀಜ ಬ್ಯಾಂಕ್ ಸ್ಥಾಪನೆ ನಿರ್ಧಾರ ದ 20 ಜಿಐ ಟ್ಯಾಗ್ ಹೊಂದಿರುವ ಬೆಳೆಗಳು, ಹಾಗೂ ಇತರೆ ದೇಸಿ ತಳಿಗಳು ನಶಿಸಿ ಹೋಗುವುದನ್ನು ತಪ್ಪಿಸಲು ಸಹಾಯವಾಗಲಿದೆ.

ತೊಗರಿ ಬೆಳೆಯಲ್ಲಿ ನೂತನ ತಾಂತ್ರಿಕತೆ ಅಳವಡಿಕೆ, ಕ್ಷೇತ್ರ ವಿಸ್ತರಣೆ ಮತ್ತು ತೊಗರಿಯನ್ನು ಅಂತರ ಬೆಳೆಯನ್ನಾಗಿ ಪ್ರೋತ್ಸಾಹಿಸುವ ಮೂಲಕ ಉತ್ಪಾದನೆಯಲ್ಲಿ ರಾಷ್ಟ್ರದಲ್ಲೆ ಮುಂಚೂಣಿ ರಾಜ್ಯವನ್ನಾಗಿಸುವ ನಿರ್ಧಾರ ತೊಗರಿ ಬೆಳೆಗಾರರ ಹಿತರಕ್ಷಣೆಗೆ ನೀಡುವ ಆದ್ಯತೆಗೆ ಸಾಕ್ಷಿಯಾಗಿದೆ. ಕನಿಷ್ಠ ಬೆಂಬಲ ಬೆಲೆ ಯೋಜನೆಯಲ್ಲಿ ತೊಗರಿ ಖರೀದಿಗೆ ಕೇಂದ್ರ ಸರ್ಕಾರ ನಿಗದಿಪಡಿಸಿರುವ 7,550 ರೂ.ಗಳೊಂದಿಗೆ ರಾಜ್ಯ ಸರ್ಕಾರ 450 ರೂ. ಪ್ರೋತ್ಸಾಹ ಧನ ಘೋಷಣೆ ಮಾಡಿದ್ದು, ಈ ಉದ್ದೇಶಕ್ಕೆ 138 ಕೋಟಿ ರೂ.ಗಳನ್ನು ಒದಗಿಸಿರುವುದರಿಂದ ಸರ್ಕಾರ ಕೊಟ್ಟ ಮಾತನ್ನು ಉಳಿಸಿಕೊಂಡಂತಾಗಿದೆ ಎಂದು ಸಚಿವರು ಹೇಳಿದ್ದಾರೆ.

ರಾಜ್ಯದ ಎಲ್ಲ ಎಪಿಎಂಸಿಗಳಲ್ಲಿ ಪರವಾನಗಿ ಪಡೆದ ಶ್ರಮಿಕರು ಮೃಪಟ್ಟಾಗ ಅವರ ವಾರಸುದಾರರಿಗೆ ಇದುವರೆಗೆ ನೀಡುತ್ತಿದ್ದ ಒಂದು ಲಕ್ಷ ರೂ. ಪರಿಹಾರವನ್ನು ಐದು ಲಕ್ಷ ರೂ.ಗಳಿಗೆ ಹೆಚ್ಚಳ ಮಾಡಿರುವುದರಿಂದ ಅಂತಹ ಕುಟುಂಗಬಳಿಗೆ ಸ್ವಲ್ಪಮಟ್ಟಿಗೆ ಆರ್ಥಿಕ ನೆರವು ಸಿಕ್ಕಂತಾಗಲಿದೆ. ಕುರಿ ಮತ್ತು ಮೇಕೆ ಸಾಕಾಣಿಕೆದಾರರಿಗೂ ಕೊಡುಗೆ ನೀಡಲಾಗಿದ್ದು.

ಕೊಪ್ಪಳ ಜಿಲ್ಲೆಯ ಬೂದುಗುಂಪ ಗ್ರಾಮದಲ್ಲಿ 25 ಕೋಟಿ ರೂ. ವೆಚ್ಚದಲ್ಲಿ ಕುರಿ ಮತ್ತು ಮೇಕೆ ಮಾರುಕಟ್ಟೆ ನಿರ್ಮಾಣ ಮಾಡುತ್ತಿರುವುದು ಕುರಿಗಾರರಿಗೆ ಉತ್ತೇಜನ ನೀಡಿದಂತಾಗಿದೆ. ಬೆಂಗಳೂರಿನಲ್ಲೂ ಸುಸಜ್ಜಿತ ಕುರಿ ಮತ್ತು ಮೇಕೆ ಮಾರುಕಟ್ಟೆ ಪ್ರಾರಂಭ ಮಾಡಲು ನಿರ್ಧರಿಸಿರುವುದೂ ಕೂಡ ಒಳ್ಳೆಯ ಬೆಳವಣಿಗೆ ಎಂದು ಹೇಳಿದ್ದಾರೆ.

ಚಿಕ್ಕಬಳ್ಳಾಪುರದಲ್ಲಿ ಎಪಿಎಂಸಿಯಿಂದ ಅಂತಾರಾಷ್ಟ್ರೀಯ ಮಟ್ಟದ ಹೈಟೆಕ್ ಹೂವಿನ ಮಾರುಕಟ್ಟೆ ಮತ್ತು ಕೆಜಿಎಫ್‌ನಲ್ಲಿ ರೈತರ ಆಧುನಿಕ ಮಾರುಕಟ್ಟೆ ನಿರ್ಮಾಣ ಯೋಜನೆಗಳ ರೈತರ ಆರ್ಥಿಕ ಶಕ್ತಿ ಸುಧಾರಣೆಗೆ ನೆರವಾಗಲಿವೆ.20 ಕೋಟಿ ರೂ. ವೆಚ್ಚದಲ್ಲಿ ಸಿ ಧಾನ್ಯಗಳ ಹಬ್ ಸ್ಥಾಪನೆಯಿಂದ ಸಾವಯವ ಉತ್ಪನ್ನಗಳು ಮತ್ತು ಸಿರಿಧಾನ್ಯಗಳ ಬೇಡಿಕೆ ಮತ್ತು ಪೂರೈಕೆಗಳ ಅಂತರವನ್ನು ಸರಿದೂಗಿಸಲು ಹಾಗೂ ರೈತರಿಗೆ ಸೂಕ್ತ ಮಾರುಕಟ್ಟೆಯನ್ನು ಕಲ್ಪಿಸಲು ನೆರವಾಗಲಿದೆ.

ಬಸವನಬಾಗೇವಾಡಿ ಕ್ಷೇತ್ರದ ತಿಡಗುಂದಿಯಲ್ಲಿ ಪ್ಲಗ್ ಅಂಡ್ ಪ್ಲೇ ಸೌಲಭ್ಯ ಇರುವ ಫ್ಲಾಟ್ ಪ್ಯಾಕ್ಟರಿ ಸ್ಥಾಪನೆ ಮಾಡುವ ನಿರ್ಧಾರ ಘೋಷಣೆ ಮಾಡಿರುವುದು ಉತ್ತರ ಕರ್ನಾಟಕ ಭಾಗದಲ್ಲಿ ಕೈಗಾರಿಕೆಗಳನ್ನು ಉತ್ತೇಜಿಸಲು ನೆರವಾಗಲಿದೆ.

# ವಿಜಯಪುರದಲ್ಲಿ ಜೆಡಿಎಸ್ ಪ್ರತಿಭಟನೆ

ವಿಜಯಪುರ– ಗ್ಯಾರಂಟಿ ಯೋಜನೆಗಳ ಅಸಮರ್ಪಕ ಅನುಷ್ಠಾನ ಹಾಗೂ ಬಸ್ ದರ ಸೇರಿ ವಿವಿಧ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಜನತಾದಳ (ಜಾತ್ಯತಿತ) ಕಾರ್ಯಕರ್ತರು ನಗರದಲ್ಲಿ ಗುರುವಾರ ಪ್ರತಿಭಟನಾ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ರಾಜ್ಯ ಕಾಂಗ್ರೆಸ್ ಸರ್ಕಾರ ವಿಧಾನಸಭೆ ಚುನಾವಣೆ ಪೂರ್ವದಲ್ಲಿ ಪಂಚ ಗ್ಯಾರಂಟಿ ಯೋಜನೆಯ ಭರವಸೆ ನೀಡಿ ಅಧಿಕಾರಕ್ಕೆ ಬಂದಿದೆ. ಗೃಹಲಕ್ಷ್ಮೀ ಯೋಜನೆಯಡಿ ಪ್ರತಿ ತಿಂಗಳು ನೀಡಬೇಕಿದ್ದ 2 ಸಾವಿರ ರೂ. ನೀಡದೆ ದ್ರೋಹ ಮಾಡುತ್ತಿದೆ. ಲೋಕಸಭೆ ಹಾಗೂ ಉಪಚುನಾವಣೆ ಸಂದರ್ಭದಲ್ಲಿ ಹಣ ಹಾಕಿ ರಾಜಕೀಯ ಮಾಡುತ್ತಿದೆ ಎಂದು ಪ್ರತಿಭಟನಾಕಾರರು ದೂರಿದರು.

ಸರ್ಕಾರ ಗೃಹಲಕ್ಷ್ಮೀ ಹಣವನ್ನು ಹೇಳಿದಂತೆ ಯಾವ ದಿನಾಂಕದಂದು ನೀಡುತ್ತಾರೆ ಎಂದು ಘೋಷಿಸಲಿ. ವಿದ್ಯಾರ್ಥಿಗಳ ಯುವನಿಧಿ ಹಣ ಸಹ ಸರಿಯಾಗಿ ಬಿಡುಗಡೆ ಮಾಡುತ್ತಿಲ್ಲ. ಅಲ್ಲದೆ, ಸದ್ಯ ಏಕಾಏಕಿ ಬಸ್ ದರ ಸೇರಿ ಅಗತ್ಯ ವಸ್ತುಗಳ ಬೆಲೆ ಏರಿಸುವ ಮೂಲಕ ರಾಜ್ಯದ ಜನರ ಮೇಲೆ ಹೊರೆ



ಹಾಕುತ್ತಿರುವುದು ಖಂಡನೀಯ ಎಂದು ಆಕ್ರೋಶ ಹೊರಹಾಕಿದರು.

ರಾಜ್ಯಪಾಲರು ಕೂಡಲೇ ಮಧ್ಯ ಪ್ರವೇಶಿಸಿ ಸರ್ಕಾರ ಘೋಷಣೆ ಮಾಡಿದ ಪಂಚ ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ನಿಭಾಯಿಸಿಕೊಂಡು ಹೋಗುವಂತೆ ನಿರ್ದೇಶನ ನೀಡಬೇಕು ಎಂದು ಮನವಿ ಮಾಡಿದರು.

# ತಾಳಿಕೋಟೆ | ಮಕ್ಕಳು ಮೊಬೈಲ್ ದಾಸರಾಗದಂತೆ ನೋಡಿಕೊಳ್ಳಿ

ತಾಳಿಕೋಟೆ– ಅತಿಯಾದ ಮೊಬೈಲ್ ಗೀಳಿನಿಂದಾಗಿ ಮಕ್ಕಳು ದೈಹಿಕ ಹಾಗೂ ಮಾನಸಿಕವಾಗಿ ದಣಿಯುತ್ತಿದ್ದಾರೆ. ಅದರಿಂದಾಗುವ ದುಷ್ಪರಿಣಾಮಗಳಿಂದ ದೂರವಾಗಲು ಮಕ್ಕಳು ಮೊಬೈಲ್ ದಾಸರಾಗದಂತೆ ನೋಡಿಕೊಳ್ಳುವುದು ಪಾಲಕರ ಜವಾಬ್ದಾರಿಯಾಗಿದೆ ಎಂದು ತಾಳಿಕೋಟೆ ಸಮೂಹ ಸಂಪನ್ಮೂಲ ವ್ಯಕ್ತಿ ರಾಜು ವಿಜಾಪುರ ಅಭಿಪ್ರಾಯ ಪಟ್ಟರು.




ಅವರು ಪಟ್ಟಣದ ಹಡಗಿನಾಳ ರಸ್ತೆಯಲ್ಲಿರುವ ಸೂಗೂರೇಶ್ವರ ವಿದ್ಯಾ ವರ್ಧಕ ಸಂಘದ ಸರಸ್ವತಿ ವಿದ್ಯಾ ಮಂದಿರ ಹಿರಿಯ ಪ್ರಾಥಮಿಕ ಶಾಲೆಯ 2024–25 ಸಾಲಿನ ಶಾಲಾ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಸಾಂಸ್ಕೃತಿಕ ಸಮಾರಂಭ ಉದ್ಘಾಟಿಸಿ ಬುಧವಾರ ಸಂಜೆ ಮಾತನಾಡಿದರು.

ಸ.ಪ್ರಾ.ಶಿ.ಸ. ಸಹಕಾರಿ ಸಂಘದ ಅಧ್ಯಕ್ಷ ಸುರೇಶ್ ವಾಲಿಕರ ಹಾಗೂ ನಿವೃತ್ತ ಶಿಕ್ಷಕ ಬಸವರಾಜ್ ಗೊರಜಿ ಮಾತನಾಡಿದರು. ಸಂಸ್ಥೆಯ ಅಧ್ಯಕ್ಷ ಮುರುಗೇಶ ಅ.ಕಡಕೋಳ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ಶಾಲೆಯ ಆದರ್ಶ ವಿದ್ಯಾರ್ಥಿಗಳಿಗೆ ಪದಕಗಳನ್ನು ನೀಡಿ ಗೌರವಿಸಲಾಯಿತು.

ವೇದಿಕೆಯಲ್ಲಿ ಪುರಸಭೆ ಅಧ್ಯಕ್ಷೆ ಜುಬೇದಾ ಹುಸೇನಬಾಷಾ ಜಮಾದಾರ, ಪಿಕೆಪಿಎಸ್ ವ್ಯವಸ್ಥಾಪಕ ಶಂಕರಗೌಡ ಪಾಟೀಲ, ನಿರ್ದೇಶಕ ಶರಣಪ್ಪ ಇಲಕಲ್ಲ, ಮೂಕಿಹಾಳ ಗ್ರಾ.ಪಂ ಸದಸ್ಯ ಜಾವೇದ್ ಪಟೇಲ, ಈರಣ್ಣ ಕಲಬುರ್ಗಿ, ವಿನಾಯಕ ಶಿಕ್ಷಣ ಸಂಸ್ಥೆ ಅಧ್ಯಕ್ಷ ಸಂಗಮೇಶ ದೇಸಾಯಿ, ಭೋಗೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಸಂಗನಗೌಡ ಹಣವಂರಡ್ಡಿ, ಎನ್.ಎಚ್.ಮದರಿ, ಮುಖ್ಯ ಶಿಕ್ಷಕ ಬಿ.ವಾಯ್.ಚವನಭಾವಿ, ಹಳೆಯ ವಿದ್ಯಾರ್ಥಿಗಳ ಸಂಘದ ಸದಸ್ಯರು, ಶಿಕ್ಷಕ ವರ್ಗ ಹಾಗೂ ಪಾಲಕರು ಇದ್ದರು.

ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಸ್ನೇಹಾ, ರೇಣುಕಾ ಪ್ರಾರ್ಥಿಸಿದರು. ಉಪಾಧ್ಯಕ್ಷ ರಮೇಶ ಮದ್ದರಕಿ ಸ್ವಾಗತಿಸಿದರು. ಮುಖ್ಯ ಶಿಕ್ಷಕ ಬಿ.ವೈ. ಚವನಭಾವಿ ನಿರೂಪಿಸಿ ವಂದಿಸಿದರು.

# ವಿವಿಧ ಕಾಮಗಾರಿಗಳಿಗೆ ಗುದ್ದಲಿ ಪೂಜೆ



ಹುಣಶ್ಯಾಳ– ವಿಜಯಪುರ ಜಿಲ್ಲೆಯ ದೇವರ ಹಿಪ್ಪರಗಿ ಮತ ಕ್ಷೇತ್ರದ ಶಾಸಕರಾದ ರಾಜುಗೌಡ ಪಾಟೀಲ್ ಅವರ ಸಹೋದರ ಸಚಿನಗೌಡ ಪಾಟೀಲ್ ಅವರಿಂದ ಗುದ್ದಲಿ ಪೂಜೆ ನೆರವೇರಿಸಿದರು.

ದೇವರ ಹಿಪ್ಪರಗಿ ಮತ ಕ್ಷೇತ್ರದ ಹುಣಶ್ಯಾಳ ಪಿ.ಬಿ ಗ್ರಾಮದಲ್ಲಿ ಎಸ್.ಸಿ ಕಾಲೋನಿಯಲ್ಲಿ 50 ಲಕ್ಷ ರೂ.ವೆಚ್ಚದಲ್ಲಿ ಸಿ.ಸಿ ರಸ್ತೆ ನಂತರ ಹಾಗೂ ಬೂದಿಹಾಳ ಗ್ರಾಮದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ಸಿ.ಸಿ ರಸ್ತೆಗೆ ಮತ್ತು ಉತ್ನಾಳ ಗ್ರಾಮದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ಸಿ.ಸಿ ರಸ್ತೆ ಜೊತೆಗೆ ಸಾತಿಹಾಳ ಗ್ರಾಮದಲ್ಲಿ 20 ಲಕ್ಷ ರೂ. ವೆಚ್ಚದಲ್ಲಿ ಜೆ.ಜೆ.ಎಮ್ ಕಾಮಗಾರಿಗೆ ಮತ್ತು 50 ಲಕ್ಷ ರೂ. ಸಿ.ಸಿ ರಸ್ತೆಗೆ ಭೂಮಿ ಪೂಜೆ ನೆರವೇರಿಸಿ ನಂತರ ಮಾತನಾಡಿದ ಅವರು ನಮ್ಮ ಮತ ಕ್ಷೇತ್ರದಲ್ಲಿನ ಮೂಲಭೂತ ಸೌಲಭ್ಯಗಳಾದ ಸಿ.ಸಿ ರಸ್ತೆ, ಕುಡಿಯುವ ನೀರು, ಚರಂಡಿ, ವಿದ್ಯುತ್ ಶಾಲೆಗಳು, ಅಂಗನವಾಡಿ ಕೇಂದ್ರಗಳು ಸೇರಿದಂತೆ ಹೀಗೆ ಹಲವಾರು ಮೂಲಭೂತ ಸೌಲಭ್ಯಗಳನ್ನು ಹಂತ ಹಂತವಾಗಿ ಪೂರ್ಣಗೊಳಿಸುತ್ತೇವೆ. ಅದಕ್ಕೆ ಪ್ರತಿ ಗ್ರಾಮದ ಹಿರಿಯರ, ಕಿರಿಯರ ಸಹಕಾರ ಬೇಕು ಎಂದರು.

ಇದೆ ಸಂದರ್ಭದಲ್ಲಿ ಗ್ರಾಮ ಪಂಚಾಯತ ಸದಸ್ಯರು ವಿವಿಧ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಶಾಲಾ ಮಕ್ಕಳಿಗೆ ಬ್ಯಾಗ್ ವಿತರಣೆ



ಕಲಕೇರಿ– ವಿಜಯಪುರ ಜಿಲ್ಲೆಯ ಕಲಕೇರಿ ಗ್ರಾಮದಲ್ಲಿ ಸರ್ಕಾರಿ ಕನ್ನಡ ಗಂಡು ಮಕ್ಕಳ ಶಾಲೆಯ ಮೂರು ಶಾಲೆಯ ಆವರಣದಲ್ಲಿ ಡಾ.ನಾಗರಾಜ್ ಗೌರಿಬಿದನೂರ ಸಂಯೋಜಕರು ರಾಷ್ಟ್ರೀಯ ಸಾಕ್ಷರತಾ ಮಷೀನ್ ಭಾರತ ಸರ್ಕಾರ ಇವರ ಯೋಜನೆ ಅಡಿಯಲ್ಲಿ ಕಲಕೇರಿ ಗ್ರಾಮದಲ್ಲಿ ಇರುವ ಎಲ್ಲಾ ಸರ್ಕಾರಿ ಶಾಲೆಯ ಮಕ್ಕಳಿಗೆ ಉಚಿತ ಶಾಲೆಯ ಬ್ಯಾಗ್‌ಗಳನ್ನು ವಿತರಣಾ ಕಾರ್ಯಕ್ರಮ ಭಾಗ್ಯವಂತ ಮೋಪಗಾರ ಹಾಗೂ ಬಲವಂತರ ಮೋಪಗಾರ ಇವರ ನೇತೃತ್ವದಲ್ಲಿ ನಡೆಯುವುದು.

ಕಾರ್ಯಕ್ರಮದಲ್ಲಿ ದೇವರ ಹಿಪ್ಪರಗಿ ಮತ ಕ್ಷೇತ್ರದ ಶಾಸಕರು ರಾಜುಗೌಡ ಪಾಟೀಲ್ ಇವರ ಸೋದರರಾದಂತ ಸಚಿನ್ ಗೌಡ ಪಾಟೀಲ್ ಇವರಿಂದ ಕಾರ್ಯಕ್ರಮ ನೆರವೇರಿತು.

ಸಿದ್ದು ಬುಳ್ಳ ವೇದಿಕೆಯನ್ನು ಉದ್ದೇಶಿಸಿ ಮಾತನಾಡಿದರು. ವಿದ್ಯಾರ್ಥಿಗಳಿಗೆ ಸರಕಾರದಿಂದ ಬರುವಂತಹ ಯೋಜನೆಗಳು ಗ್ರಾಮದ ಭಾಗ್ಯವಂತ ಮೋಪಗಾರ ಹಾಗೂ ಬಲವಂತರಾಯ ಮೊಪಗಾರ್ ಇವರು ದಿಲ್ಲಿವರೆಗೂ ಹೋಗಿ ಶಾಲೆಗಳಿ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಶಾಲೆ ಬ್ಯಾಗಗಳನ್ನು ವಿತರಣಾ ಮಾಡಿದರು ಎಂದು ಈ ಸಂದರ್ಭದಲ್ಲಿ ತಿಳಿಸಿದರು.

ಕಲಕೇರಿ ಗ್ರಾಮದ ಭೂದಾನಿಗಳಾದ ಡಾ, ವ್ಹಿ.ಕೆ ಜಾಲಹಳ್ಳಿ ಇವರು ಪ್ರತಿಯೊಬ್ಬರು ಗ್ರಾಮದ ಇಂಥ ಯುವಕರು ಸರ್ಕಾರಿ ಶಾಲೆಗಳಿಗೆ ಉಚಿತ ಬ್ಯಾಗಗಳನ್ನು ವಿತರಣಾ ಮಾಡಿ ಸಣ್ಣ ವಯಸ್ಸಿನಲ್ಲಿ ದೊಡ್ಡ ಸಾಧನೆ ಮಾಡಿದ ಇವರಿಗೆ ನಾವೆಲ್ಲರೂ ಬೆಂಬಲಿಸಬೇಕು ಎಂದು ತಿಳಿಸಿದರು.

ಎಸ್.ಎಲ್ ನಾಯ್ಕೋಡಿ. ಬಿ.ಆರ್.ಸಿ ಹಣಮಂತ್ ವಡ್ಡರ್. ಗ್ರಾಮ ಪಂಚಾಯತಿ ಅಧ್ಯಕ್ಷರು ರಾಜ ಅಹ್ಮದ್ ಸಿರಸಗಿ. ಗ್ರಾಮ ಪಂಚಾಯತಿ ಉಪಾಧ್ಯಕ್ಷರು ವಿಜಯಲಕ್ಷ್ಮಿ ಪರಶುರಾಮ್ ಬೇಡರ್. ಚಂದ್ರಕಾಂತ್ ಬಡಿಗೇರ್ ಎಸ್.ಡಿ.ಎಂ.ಸಿ ಅಧ್ಯಕ್ಷರು, ಮಲ್ಲು ನಾವಿ, ಪ್ರವೀಣ್ ಜಗಶೆಟ್ಟಿ, ಊರಿನ ಹಿರಿಯರಾದ ಗಂಗಮ್ಮ ಮೋಪಗಾರ, ಇರಗಂಟೆಪ್ಪ ಮೋಪಗಾರ, ಚಂದ್ರುಚಂದ್ರು ಉಪ್ಪಾರ್ ಸಿಂದಗಿ ತಾಲೂಕ ಅಧ್ಯಕ್ಷರು. ಪರಶುರಾಮ್ ಉಪ್ಪಾರ್ ಸಿಂದಗಿ ನಗರ ಘಟಕ ಅಧ್ಯಕ್ಷರು. ಎಲ್ಲಾ ಭಗೀರಥ ಸಮಾಜದ ಮುಖಂಡರು ಹಾಗೂ ಊರಿನ ಮುಖಂಡರು ಗ್ರಾಮಸ್ಥರು ಮತ್ತು ಎಲ್ಲಾ ಶಾಲೆಯ ಮುಖ್ಯ ಗುರುಗಳು ಗುರು ಮಾತೆಯವರು ಎಲ್ಲಾ ಮೂರು ಶಾಲೆಯ ವಿದ್ಯಾರ್ಥಿಗಳು ಸೇರಿದಂತೆ ಈ ಕಾರ್ಯಕ್ರಮ ಅದ್ದೂರಿಯಿಂದ ನಡೆಯಿತು.

# ಶಾಲಾ ಅಭಿವೃದ್ಧಿಯಲ್ಲಿ ಪಾಲಕರ ಪಾತ್ರ ಮುಖ್ಯ

ಯಲಗೋಡ–ದೇವರ ಹಿಪ್ಪರಗಿ ತಾಲ್ಲೂಕಿನ ಯಲಗೋಡದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ಪಾಲಕರ ಸಭೆ ನಡೆಯಿತು.

ಶಾಲೆಯ ಶೈಕ್ಷಣಿಕ ಚಟುವಟಿಕೆಗಳಲ್ಲಿ ಪಾಲಕರು ಭಾಗವಹಿಸಬೇಕು. ಪಾಲಕರು ಮಕ್ಕಳ ಶೈಕ್ಷಣಿಕ ಪ್ರಗತಿಗೆ ಪೂರಕ ವಾಗಿರುವ ವಾತಾವರಣವನ್ನು ಮನೆಯಲ್ಲಿ ನಿರ್ಮಾಣ ಮಾಡಬೇಕು. ಮಕ್ಕಳ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವಲ್ಲಿ ಕೇವಲ ಶಿಕ್ಷಕರ ಪಾತ್ರ ದೊಂದಿಗೆ ಪೋಷಕರ ಪಾತ್ರವೂ ಅತಿ ಮಹತ್ವದ್ದಾಗಿದೆ ಎಂದು ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ನಡೆದ ಪಾಲಕರ ಸಭೆಯಲ್ಲಿ ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯದ ತಾಲೂಕಾ ಅಧಿಕಾರಿಗಳಾಗಿರುವ ರಮೇಶ್ ಪೂಜಾರಿಯವರು ಮುಖ್ಯ ಅತಿಥಿ ಸ್ಥಾನ ವಹಿಸಿ ಮಾತನಾಡಿದರು.

ಸಭೆಯಲ್ಲಿ ಮಹಾಜನ ಸರಕಾರಿ ಮಾದರಿ ಪ್ರಾಥಮಿಕ ಶಾಲೆ ಯಲಗೋಡದ ಎಸ್‌ಡಿಎಂಸಿ ಅಧ್ಯಕ್ಷ ಮಾಂತೇಶ ಕೂಟನೂರ. ಮುಖ್ಯ ಗುರುಗಳಾದ ಮಲ್ಲಿಕಾರ್ಜುನ ಅಂಕಲಗಿ, ಬಸವರಾಜ ನಾಟಿಕಾರ, ಗಜಾನನ ನಾಟಿಕಾರ, ಚಿದಾನಂದ ಶಾಸ್ತ್ರಿ ಹಾಗೂ ಎಸ್.ಡಿ.ಎಮ್.ಸಿ ಸದಸ್ಯರು ಹಾಗೂ ಪಾಲಕರು ಶಿಕ್ಷಕರು ಉಪಸ್ಥಿತರಿದ್ದರು.



ಕಾರ್ಯಕ್ರಮವವನ್ನು ಮಂಗಳಬಾಯಿ ಅಲ್ಮದ ಗುರು ಮಾತೆಯರು ನಿರೂಪಿಸಿದರು. ದಸ್ತಗಿರ್ ಬಗಲಿ ಸ್ವಾಗತಿಸಿದರು. ಗುರುನಾಥ ರೊಟ್ಟಿ ವಂದಿಸಿದರು.

## ರಬಕವಿ ಬನಹಟ್ಟಿ: ಮಾಯವಾದ ಗ್ಯಾರಂಟಿ ಅನುಷ್ಠಾನ ಕಾರ್ಯಾಲಯ

# ಕಚೇರಿಗಳಿಗೆ ಅಲೆದಾಡುತ್ತಿರುವ ಫಲಾನುಭವಿಗಳು



ರಬಕವಿ ಬನಹಟ್ಟಿ- ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಕ್ಕಾಗಿ ರಬಕವಿ ಬನಹಟ್ಟಿ ತಹಶೀಲ್ದಾರ್ ಕಾರ್ಯಾಲಯದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಕಾರ್ಯಾಲಯವನ್ನು ಉದ್ಘಾಟಿಸಲಾಗಿತ್ತು. ಆದರೆ ಈಗ ಈ ಕಾರ್ಯಾಲಯವೇ ನಾಪತ್ತೆಯಾಗಿದೆ.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಕಾರ್ಯಾಲಯಕ್ಕೆ ತಾಲ್ಲೂಕು ಮಟ್ಟದಲ್ಲಿ ಅಧ್ಯಕ್ಷ ಮತ್ತು ಸದಸ್ಯರನ್ನು ನೇಮಕ ಮಾಡಲಾಗಿತ್ತು. ನಂತರ ತಹಶೀಲ್ದಾರ್ ಕಾರ್ಯಾಲಯದ ಒಂದು ಭಾಗದಲ್ಲಿ ಯೋಜನೆ ಅನುಷ್ಠಾನದ ಕಚೇರಿಯ ಉದ್ಘಾಟನೆ ಕೂಡ ಅದ್ದೂರಿಯಾಗಿ ನಡೆದಿತ್ತು. ಆದರೆ ಈಗ ಈ ಕಾರ್ಯಾಲಯದಲ್ಲಿ ತಹಶೀಲ್ದಾರ್ ಕಚೇರಿಯ ದಾಖಲೆಗಳ ಡಿಜಟಲೀಕರಣ ನಡೆಯುತ್ತಿದೆ. ಅನುಷ್ಠಾನ ಕಾರ್ಯಾಲಯದಲ್ಲಿ ಅಧ್ಯಕ್ಷರು, ಸದಸ್ಯರು ಮತ್ತು ಸಿಬ್ಬಂದಿ ಇಲ್ಲದೇ ಇರುವುದರಿಂದ ಫಲಾನುಭವಿಗಳು ಪರದಾಡುವ ಪರಿಸ್ಥಿತಿ ನಿರ್ಮಾಣಗೊಂಡಿದೆ.

ಸಮೀಪದ ತಮದಡ್ಡಿ ಗ್ರಾಮದ ಸುನಂದಾ ಶಿರಗಾರ, ಕಮಲವ್ವ ಗೂಳಗೊಂಡ, ಮುತ್ತವ್ವ ಗೂಳಗೊಂಡ, ರಾಜವ್ವ ಹಳಿಂಗಳಿ, ಸುಮಿತ್ರಾ ಪೂಜಾರಿ ಇವರ ದಾಖಲೆಗಳಲ್ಲಿ ತೆರಿಗೆದಾರರು ಅಂತ ನಮೂದಾಗಿದೆ. ಆದರೆ ಇವರೆಲ್ಲರೂ ಕೂಲಿ ಕಾರ್ಮಿಕರು. ತಮ್ಮ ದಾಖಲೆಗಳನ್ನು ಹಿಡಿದುಕೊಂಡು ಇವರು ಹಲವಾರು ದಿನಗಳ ಕಾಲ ಅನುಷ್ಠಾನ ಯೋಜನೆಗಳ ಕಾರ್ಯಾಲಯಕ್ಕೆ ಅಲೆದಾಡಿದ್ದಾರೆ. ಯಾವುದೇ ಪ್ರಯೋಜನವಾಗಲಿಲ್ಲ. ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ಅಧಿಕಾರಿಗಳನ್ನೂ ಭೇಟಿಯಾದರು. ನಂತರ ಸಚಿವರ ಕಾರ್ಯಾಲಯಕ್ಕೆ ಹೋಗಿ ಬಂದರೂ ಪ್ರಯೋಜನವಾಗಿಲ್ಲ ಎನ್ನುತ್ತಾರೆ ಗ್ರಾಮದ ಮುಖಂಡ ಸುರೇಶ ಅಕ್ಕಿವಾಟ.

ಗ್ಯಾರಂಟಿ ಯೋಜನೆ ಗಳನ್ನು ಪಡೆದುಕೊಳ್ಳುವುದಕ್ಕಾಗಿ ಹಲವು ಅರ್ಹ ಫಲಾನುಭವಿಗಳು ಪರದಾಡುತ್ತಿದ್ದಾರೆ. ಅವರಿಗೆ ಸರಿಯಾಗಿ ಮಾರ್ಗದರ್ಶನ ನೀಡಲು ಮತ್ತು ಅವರ ಸಮಸ್ಯೆಗಳನ್ನು ನಿವಾರಣೆ ಮಾಡುವುದಕ್ಕಾಗಿ ಸರ್ಕಾರ ಅಧ್ಯಕ್ಷ ಮತ್ತು ಸದಸ್ಯರನ್ನು ನೇಮಕ ಮಾಡಿತ್ತು. ಆದರೆ ಕಾರ್ಯಾಲಯದಲ್ಲಿ ಇವರ್‍ಯಾರೂ ಇಲ್ಲದ ಕಾರಣ ಫಲಾನುಭವಿಗಳಿಗೆ ತೊಂದರೆಯಾಗಿದೆ ಎಂದು ಬಿಜೆಪಿಯ ರಬಕವಿ ಬನಹಟ್ಟಿ ಘಟಕದ ಅಧ್ಯಕ್ಷ ಶ್ರೀಶೈಲ ಬೀಳಗಿ ದೂರಿದ್ದಾರೆ.

# ಅಭಿವೃದ್ಧಿ ಕಾಮಗಾರಿಗಳಿಗಾಗಿ ಸಿಎಂಗೆ ಮನವಿ



ಇಳಕಲ್- ಹುನಗುಂದ ವಿಧಾನಸಭಾ ಕ್ಷೇತ್ರದ ಒಟ್ಟಾರೆ ಅಭಿವೃದ್ಧಿಗಾಗಿ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ಶಾಸಕ ವಿಜಯಾನಂದ ಕಾಶಪ್ಪನವರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿಪತ್ರ ಅರ್ಪಿಸಿದರು.

ಅಧಿವೇಶನ ನಡೆದಿರುವ ಈ ಸಮಯದಲ್ಲಿ ಬೆಂಗಳೂರಿನ ಮುಖ್ಯಮಂತ್ರಿ ಕಚೇರಿಯಲ್ಲಿ ಶಾಸಕರು ಯಾವ ಯಾವ ಅಭಿವೃದ್ಧಿಗಾಗಿ ಅನುದಾನ ನೀಡಬೇಕು ಎಂಬುದನ್ನು ವಿವರಿಸಿ ಮನವಿಯನ್ನು ನೀಡಿದರು.

# ಮಹಿಳೆ ಬದುಕು ಕಟ್ಟಿಕೊಳ್ಳುವ ಕಲೆ ಕಲಿತುಕೊಳ್ಳಬೇಕು: ರಶ್ಮಿ ಎಸ್



ಬಾಗಲಕೋಟೆ- ವಿಶ್ವದ ಎಲ್ಲಾ ಕ್ಷೇತ್ರದಲ್ಲಿ ಮಹಿಳೆಯರಿಗೆ ಸಮಾನ ಸ್ಥಾನಮಾನ ದೊರೆಯವ ಅವಕಾಶಗಳಿವೆ. ಮಹಿಳೆಯರು ತಮ್ಮ ಮನೋಬಲ ಹಾಗೂ ಬುದ್ಧಿಬಲದೊಂದಿಗೆ ಉತ್ತಮ ಬದುಕು ಕಟ್ಟಿಕೊಳ್ಳುವ ಕಲೆಯನ್ನು ಕಲಿತುಕೊಳ್ಳಬೇಕೆಂದು ಮಹಿಳಾ ಚಿಂತಕಿ, ಬರಹಗಾರ್ತಿ ಶ್ರೀಮತಿ ರಶ್ಮಿ ಎಸ್ ಅವರು ಹೇಳಿದರು

ಅವರು ಶನಿವಾರ ಬಾಗಲಕೋಟೆ ನವನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಐಕ್ಯೂಎಸಿ ಮತ್ತು ಮಹಿಳಾ ಸಬಲೀಕರಣ ಘಟಕದ ಆಶ್ರಯದಲ್ಲಿ ನಡೆದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು. ಮಹಿಳೆಯರು ಇಂದು ಕುಟುಂಬ, ಸಮಾಜ, ನಾಡು ಮತ್ತು ದೇಶ ನಿರ್ವಹಿಸುವ ಆತ್ಮವಿಶ್ವಾವನ್ನು ಬೆಳೆಸಿಕೊಂಡಿದ್ದಾರೆ. ವಿದ್ಯಾರ್ಥಿನಿಯರು, ಹುಡಗರು ತಮ್ಮ ಅಧ್ಯಯನದಲ್ಲಿ ಭಾಷಿಕ ಶುದ್ಧತೆ ಕಲಿತು ಜನ ಸಮುದಾಯದ ಧ್ವನಿಯಾಗುವ ಮೂಲಕ ಬದುಕಿನಲ್ಲಿ ನೈತಿಕತೆ ಹಾಗೂ ದಕ್ಷತೆಯನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಜಿಲ್ಲಾಧಿಕಾರಿಗಳಾದ ಶ್ರೀಮತಿ ಜಾನಕಿ.ಕೆ.ಎಂ ಅವರು ಮಹಿಳಾ ದಿನಾಚರಣೆಯ ಕಾರ್ಯಕ್ರಮವನ್ನು ದೀಪ ಬೆಳೆಗಿಸುವ ಮೂಲಕ ಉದ್ಘಾಟಿಸಿ, ಮಾತನಾಡಿ ನಮ್ಮ ಮಹಿಳೆಯರ ಮನೋಸ್ಥಿತಿಯಲ್ಲಿ ಮಾತೃತ್ವ, ಮತ್ತು ಭಾತೃತ್ವದ ಶಕ್ತಿಯಿದೆ. ಇಲ್ಲಿ ಯಾರು ಮೇಲಲ್ಲ, ಕೀಳಲ್ಲ ಎಲ್ಲರೂ ಸರ್ವ ಸಮಾನರೆ ಎಂಬ ಭಾವನೆಗಳನ್ನು ನಾವು ಬೆಳೆಸಿಕೊಳ್ಳಬೇಕು. ನಾವೆಲ್ಲರೂ ಇರುವ ಸಮಯವನ್ನು ಸರಿಯಾಗಿ ಬಳಸಿಕೊಂಡು ಸಮಾಜದ ಆದರ್ಶ ವ್ಯಕ್ತಿಗಳಾಗಬೇಕು ಎಂದು ಹೇಳಿದರು.

ಪ್ರಾಂಶುಪಾಲರಾದ ಡಾ. ಅರುಣಕುಮಾರ ಗಾಳಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ನಮ್ಮ ಭಾರತದ ಸಾಂಸ್ಕೃತಿಕ ಸಮಾಜದಲ್ಲಿ ಮಹಿಳೆಯರಿಗೆ ಘನತೆ ಮತ್ತು ಗೌರವಿದೆ, ಮಾತೃತ್ವದ ಪರಂಪರೆಯನ್ನು ಪೂಜಿಸುವ ಸಂಸ್ಕಾರವು ನಮ್ಮದಾಗಿದೆ. ಸಮಾಜದಲ್ಲಿ ಮಹಿಳೆಯರಿಗೆ ಕಾಳಜಿ ಮಾಡುವದರೊಂದಿಗೆ ರಕ್ಷಣೆಯನ್ನು ಕೊಡುವ ಸಹೋದರತ್ವದ ಸಂಸ್ಕೃತಿಯನ್ನು ನಾವು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಐಕ್ಯೂಎಸಿ ಸಂಚಾಲಕ ಡಾ. ಪ್ರಭುದೇವ ಮಂಡಿ ಹಾಗೂ ಮಹಿಳಾ ಸಬಲೀಕರಣ ಘಟಕದ ಸಂಚಾಲಕರಾದ ಡಾ.ಮೂಬೀನ್ ಬೆಳಗಾಮ್ ಅವರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಮಹಿಳಾ ದಿನಾಚರಣೆಯ ಪ್ರಯುಕ್ತ ಜಿಲ್ಲಾಧಿಕಾರಿಗಳಾದ ಶ್ರೀಮತಿ ಜಾನಕಿ.ಕೆ.ಎಂ. ಅವರಿಗೆ ಮತ್ತು ಮುಖ್ಯ ಅತಿಥಿಗಳಾದ ಅಂಕಣ ಬರಹಗಾರ್ತಿ ಶ್ರೀಮತಿ ರಶ್ಮಿ ಎಸ್ ಅವರಿಗೆ ಕಾಲೇಜಿನ ಪರವಾಗಿ ಗೌರವ ಸನ್ಮಾನ ಮಾಡಲಾಯಿತು. ಮಹಿಳಾ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳ ವಿಜೇತರಿಗೆ ಪ್ರಶಸ್ತಿ ಮತ್ತು ಬಹುಮಾನ ನೀಡಲಾಯಿತು.

ಕುಮಾರಿ ಸುಜಾತ ನಾವಿ ಪ್ರಾರ್ಥಿಸಿದರು, ಡಾ.ಸುಮನ್ ಮುಚಖಂಡಿ ಸ್ವಾಗತಿಸಿ, ಅತಿಥಿಗಳ ಪರಿಚಯ ಮಾಡಿದರು. ಡಾ.ಸುಮಂಗಲಾ ಮೇಟಿ ನಿರೂಪಿಸಿದರು. ಡಾ.ಮುಬೀನ ಬೆಳಗಾವ್ ವಂದಿಸಿದರು.

# ಅಭಿವೃದ್ಧಿಗೆ ಗ್ರಾಮಾಭಿವೃದ್ಧಿ ಯೋಜನೆಯ ಸಹಕಾರ

ಗುಳೇದಗುಡ್ಡ- ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ತಾಲೂಕಿನಲ್ಲಿ ಅನೇಕ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಯೋಜನೆ ಜಿಲ್ಲಾ ನಿರ್ದೇಶಕ ಚನ್ನಕೇಶವ ಹೇಳಿದರು.

ಹಾನಪುರ ಎಲ್ಪಿ ಗ್ರಾಮದ ವಾಗ್ದೇವಿ ದೇವಸ್ಥಾನ ನಿರ್ಮಾಣ ಕಾಮಗಾರಿಗೆ ಧರ್ಮಸ್ಥಳದ ಧರ್ಮಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅವರು ನೀಡಿದ 2ಲಕ್ಷ ರೂ. ದೇಣಿಗೆ ದೇವಸ್ಥಾನದ ಕಮಿಟಿಗೆ ಹಸ್ತಾಂತರಿಸಿ ಮಾತನಾಡಿದ ಅವರು, ವ್ಯಕ್ತಿತ್ವ ಬದಲಾವಣೆ, ಕುಟುಂಬಗಳ ಸುಧಾರಣೆ, ಗ್ರಾಮಗಳ ಅಭಿವದ್ಧಿಯ ಉದ್ದೇಶದಿಂದ ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ ಎಂದರು.

ದೇವಸ್ಥಾನ ಹಾಗೂ ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ, ವೃತ್ತಿಶಿಕ್ಷಣ ಪಡೆಯುವ ಮಕ್ಕಳಿಗೆ ಶಿಷ್ಯವೇತನ ನೀಡಲಾಗುತ್ತಿದ್ದು, ಅದರಂತೆ ಹಾನಾಪೂರ ಎಲ್ಪಿ ಗ್ರಾಮದಲ್ಲಿ ವಾಗ್ದೇವಿ ದೇವಸ್ಥಾನ ನಿರ್ಮಾಣಕ್ಕೆ ದೇಣಿಗೆ ನೀಡಲಾಗಿದೆ. ಅಲ್ಲದೇ ಯೋಜನೆಯಡಿ ತಾಲೂಕಿನಲ್ಲಿ ಒಟ್ಟು 5 ಕೆರೆಗಳ ಅಭಿವೃದ್ಧಿಪಡಿಸಿ ನೀರಿನ ಸಮಸ್ಯೆಗೆ ಪರಿಹಾರ ಒದಗಿಸಿದೆ ಎಂದರು. ಗ್ರಾಮದ ಹುಲ್ಲಪ್ಪ ಚವಾಣ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ನಮ್ಮ ಗ್ರಾಮದ ಮಹಿಳೆಯರು ಆರ್ಥಿಕ ಸ್ವಾವಲಂಬನೆ ಸಾಧಿಸುತ್ತಿದ್ದಾರೆ.

# ಶೇಂಗಾ ದರ ಇಳಿಮುಖ: ರೈತರಲ್ಲಿ ಆತಂಕ

# ಬೆಂಬಲ ಬೆಲೆಯ ಮೂಲಕ ಖರೀದಿಸಲು ಒತ್ತಾಯ



ಬಾದಾಮಿ- ಮಾರುಕಟ್ಟೆಯಲ್ಲಿ ಶೇಂಗಾ ಬೆಲೆಯು ಇಳಿಮುಖವಾಗಿದ್ದರಿಂದ ರೈತರು ಆತಂಕಗೊಂಡಿದ್ದಾರೆ.

ಬೆಂಬಲ ಬೆಲೆಯಲ್ಲಿ ರೈತರಿಂದ ಶೇಂಗಾ ಖರೀದಿಸಲು ಸರ್ಕಾರ ಇನ್ನೂ ಆದೇಶ ಮಾಡದ ಕಾರಣ ಅನಿವಾರ್ಯವಾಗಿ ರೈತರು ಕಡಿಮೆ ದರದಲ್ಲಿ ಮಧ್ಯವರ್ತಿಗಳಿಗೆ ಮಾರಾಟ ಮಾಡುತ್ತಿದ್ದಾರೆ.

ಬೀಜ, ಗೊಬ್ಬರ, ಹೊಲದ ಉಳುಮೆ ಮತ್ತು ಕಾರ್ಮಿಕರ ಕೂಲಿ ಸೇರಿದಂತೆ ಎಕರೆಗೆ ಅಂದಾಜು 15 ಸಾವಿರದಿಂದ 20 ಸಾವಿರ ವೆಚ್ಚ ಬರುತ್ತದೆ. ಎಕರೆಗೆ 20 ರಿಂದ 25 ಚೀಲ ಶೇಂಗಾ ಇಳುವರಿ ಬಂದಿದೆ. ಮಾರುಕಟ್ಟೆಯಲ್ಲಿ ಶೇಂಗಾ ಧಾರಣೆ ಕುಸಿದಿದೆ. ರೈತರ ಶ್ರಮಕ್ಕೆ ಲಾಭ ಬರದಂತಾಗಿದೆ ಎಂದು ರೈತ ಭೀಮಪ್ಪ ಬಂದಕೇರಿ ಹೇಳಿದರು.

ಕಳೆದ ವರ್ಷ ಹಸಿ ಶೇಂಗಾ ಕ್ವಿಂಟಲ್‌ಗೆ 3,500- 4,000 ಇತ್ತು. ಒಣಗಿದ ಶೇಂಗಾ 7,000- 8,000 ದವರೆಗೆ ಮಾರಾಟವಾಗಿತ್ತು. ಈ ಬಾರಿ ಶೇಂಗಾ ದರ ಸಂಪೂರ್ಣ ಕುಸಿದಿದೆ. ರೈತರಿಗೆ ಭೂಮಿಗೆ ಹಾಕಿದ ಖರ್ಚು ಬಾರದಂತಾಗಿದೆ ಎಂದು ರೈತ ಶಂಕ್ರಪ್ಪ ಉಳ್ಳಾಗಡ್ಡಿ ಅಳಲು ತೋಡಿಕೊಂಡರು. ಮಾರ್ಚ್, ಏಪ್ರಿಲ್ ಮತ್ತು ಮೇವರೆಗೂ ಬೇಸಿಗೆ ಶೇಂಗಾ ಫಸಲು ಬರುತ್ತದೆ. ಸರ್ಕಾರ ಬೆಂಬಲ ಬೆಲೆಯ ಮೂಲಕ ಖರೀದಿ ಕೇಂದ್ರವನ್ನು ಆರಂಭಿಸಬೇಕು ಎಂದು ರೈತರು ಒತ್ತಾಯಿಸಿದರು.

ಜನವರಿಯಿಂದ ಮಾರ್ಚ್ ಮೊದಲ ವಾರದವರೆಗೆ ಎಪಿಎಂಸಿಯಲ್ಲಿ ಖರೀದಿದಾರರಿಂದ ಕೇವಲ 2,300 ಕ್ವಿಂಟಲ್ ಮಾತ್ರ ಶೇಂಗಾ ಖರೀದಿಯಾಗಿದೆ. ಹಸಿ ಶೇಂಗಾ 3,000- 4,000, ಒಣಶೇಂಗಾ 5500-6000 ವರೆಗೆ ಖರೀದಿ ನಡೆದಿದೆ ಎಂದು ಎಪಿಎಂಸಿ ಕಾರ್ಯ ದರ್ಶಿ ರವಿ ರಾಠೋಡ ಹೇಳಿದರು.

ಬಾಗಲಕೋಟೆ ಸಮೀಪದ ಗದ್ದನಕೇರಿಯಲ್ಲಿ ಬೆಂಬಲ ಬೆಲೆಯಿಂದ ಖರೀದಿಸಲು ಕೆಓಎಫ್ ಕೇಂದ್ರವಿದೆ. ಆದರೆ ರೈತರಿಂದ ಶೇಂಗಾ ಖರೀದಿಸಲು ಸರ್ಕಾರದಿಂದ ಬೆಂಬಲ ಬೆಲೆ ಆದೇಶ ಬಂದಿಲ್ಲ ಎಂದು ಅವರು ಪ್ರತಿಕ್ರಿಯಿಸಿದರು.

ಬೆಳೆ ಬರುವ ಮುಂಚೆಯೇ ಖರೀದಿ ಕೇಂದ್ರ ಆರಂಭಿಸಬೇಕು. ತಾಲ್ಲೂಕಿನ ರೈತರು ದೂರದ ಗದ್ದನಕೇರಿಗೆ ಹೋಗಿ ಮಾರಾಟ ಮಾಡುವುದು ತೊಂದರೆಯಾಗುತ್ತದೆ. ಪ್ರತಿಯೊಂದು ತಾಲ್ಲೂಕಿನ ಎಪಿಎಂಸಿಯಲ್ಲಿ ಇಲ್ಲವೇ ಪಿಕೆಪಿಎಸ್‌ನಲ್ಲಿ ಖರೀದಿ ಕೇಂದ್ರವನ್ನು ಆರಂಭಿಸಿ ರೈತರಿಗೆ ಅನುಕೂಲತೆ ಕಲ್ಪಿಸಬೇಕು ಎಂದು ಕರ್ನಾಟಕ ರಾಜ್ಯ ಹಸಿರು ಕ್ರಾಂತಿ ಅಧ್ಯಕ್ಷ ಪಿ.ಎಸ್. ಕವಡಿಮಟ್ಟಿ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ಹಿಂಗಾರು ಜಮೀನದಲ್ಲಿ ತಾಲ್ಲೂಕಿನಲ್ಲಿ ಒಟ್ಟು 4,856 ಹೆಕ್ಟೇರ್ ಪ್ರದೇಶದಲ್ಲಿ ರೈತರು ಶೇಂಗಾ ಬಿತ್ತನೆ ಮಾಡಿದ್ದಾರೆ ಎಂದು ಕೃಷಿ ಇಲಾಖೆ ತಿಳಿಸಿದೆ.

# ಮಹಿಳಾ ದಿನಾಚರಣೆ: ಗಮನ ಸೆಳೆದ ಪ್ರದರ್ಶನಗಳು



ಇಳಕಲ್- ಇಲ್ಲಿನ ಎಸ್ ಆರ್ ಕಂಠಿ ವೇದಿಕೆಯ ವತಿಯಿಂದ ಮಹಿಳಾ ದಿನಾಚರಣೆ ಅಂಗವಾಗಿ ಹಮ್ಮಿಕೊಂಡ ಹಲವಾರು ಸ್ಪರ್ಧೆಗಳಲ್ಲಿ ಇಳಕಲ್ ಸೀರೆ ಫ್ಯಾಷನ್ ಶೋ ಮತ್ತು ಕೇಶಾಲಂಕಾರ ಸ್ಪರ್ಧೆಗಳು ನೋಡುಗರ ಗಮನ ಸೆಳೆದವು. ಸಾಕಷ್ಟು ಮಹಿಳೆಯರು ಈ ಸ್ಪರ್ಧೆಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಬೆಳಗಿದರು. ಇವುಗಳ ಜೊತೆಗೆ ಬೆಂಕಿ ಇಲ್ಲದೇ ಅಡುಗೆ ಮಾಡುವದು ಮತ್ತು ಚುಕ್ಕಿ ರಂಗೋಲಿ ಸ್ಪರ್ಧೆಗಳನ್ನು ಮಹಿಳೆಯರಿಗಾಗಿ ಶ್ರೀ ಮಠದ ದಾಸೋಹ ಭವನದಲ್ಲಿ ಏರ್ಪಡಿಸಲಾಗಿತ್ತು.

# ವಿಜೃಂಭನೆಯಿಂದ ಜರುಗಿದ ಶ್ರೀಮಳೆರಾಜೇಂದ್ರಸ್ವಾಮಿ ಮಹಾರಥೋತ್ಸವ ಜರುಗಿತು



ಬಾಗಲಕೋಟೆ- ಜಲವನ್ನು ಪೂಜಿಸುವ, ಮಳೆ ಸೂಚನೆ ನೀಡುವ ಶ್ರೀ ಮಳೆರಾಜೇಂದ್ರಸ್ವಾಮಿ ಮಠದ ಜಾತ್ರಾ ಮಹೋತ್ಸವ ಅಂಗವಾಗಿ ಶನಿವಾರ ಹೊಸ ಮುರನಾಳ ಗ್ರಾಮದಲ್ಲಿ ಅದ್ದೂರಿಯಾಗಿ ಸಹಸ್ರಾರು ಭಕ್ತರ ಮದ್ಯ ಮಹಾರಥೋತ್ಸವ ಜರುಗಿತು.

ಬೆಳಗ್ಗೆ ಶ್ರೀ ಮಳೆರಾಜೇಂದ್ರಸ್ವಾಮಿಯ ಮೂರ್ತಿಗೆ ಅಭಿಷೇಕ ಮಹಾಮಂಗಳಾರುತಿ, ಭಗವತದ್ಗೀತಾ ಪಾರಾಯಣ ನಡೆಯಿತು. ವಿಶೇಷ ಪುಷ್ಪಾಲಂಕಾರದೊಂದಿಗೆ ವಿಶೇಶ ಪೂಜೆಗಳನ್ನು ಸಲ್ಲಿಸಲಾಯಿತು, ಹರಕೆಯೊತ್ತ ಅನೇಕಭಕ್ತಾದಿಗಳು ಡಿರ್ಗದಂಡ ನಮಸ್ಕಾರಗಳನ್ನು ಹಾಕಿ ತಮ್ಮ ಹರಕೆ ತಿರಿಸಿಕೊಂಡರು, ಮದ್ಯಾಹ್ನ ಸಾವಿರಾರು ಮಹಿಳೆಯರ ಆರತಿ ಸೇವೆ ಯೋಂದಿಗೆ ಶ್ರೀ ಸ್ವಾಮಿಯ ಮೂರ್ತಿಯೊತ್ತ ಪಲ್ಲಕ್ಕಿ, ಕುದುರೆಯನ್ನೆರಿದ ಶ್ರೀ ಮೇಘರಾಜಸ್ವಾಮಿಗಳು ನಂದಿಕೋಲು ಪುರವಂತರ ಸೇವೇಯೋಂದಿಗೆ ಭಾಜಾ ಭಜಂತ್ರಿ ಕರಡಿಮಜಲು ಸಂಭ್ರದೊಂದಿಗೆ ಸಣ್ಣ ರಥೋತ್ಸವ (ಉಚ್ಚಯ್ಯ) ಜರುಗಿತು.

ಆರತಿ ಸೇವೆಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು, ಮುಸ್ಲಿಂ ಮಹಿಳೆ ಯರು ದೀಪದ ಆರತಿಗಳಿಗೆ ಏಣ್ಣೆ ನಿಡಿ ತಮ್ಮ ಸೇವೆಯನ್ನ ಮಾಡಿದರು, ಸಣ್ಣ ರಥೋ ತ್ಸವ ಮಠದ ನಂತರ ಶ್ರೀ ಮಠದಲ್ಲಿ ಮಳೆರಾಜೇಂದ್ರಸ್ವಾಮಿ ಮೂರ್ತಿಗೆ ಮಠದ ಪೂಜ್ಯರಾದ ಮೌನೇಶ್ವರ ಸ್ವಾಮಿಗಳಿಗೆ ಸಕಲ ಭಕ್ತಾದಿಗಳೊಡನೆ ವಿಶೇಶ ಮಂಗಳಾರತಿ ನೇರೆವೆರಿಸಿದರು,

ಸಂಜೆ ಸಹಸ್ರಾರು ಜನರ ಮದ್ಯ ಜಗದ್ಗುರು ಶ್ರೀ ಮಳೆ ರಾಜೇಂದ್ರಸ್ವಾಮಿಯ ಮಹಾರಥೋತ್ಸವ ಜರುಗಿತು, ನಂತರ ಜಾತ್ರೆಯುಲ್ಲಿ ಪಾಲ್ಗೊಂಡ ಸಕಲ ಭಕ್ತಾದಿಗಳು ಮಹಾಪ್ರಸಾದ ನೇರೆವೆರಿಸಿದರು, ಹಿಂದು ಮುಸ್ಲಿಂ ಭಾವೈಕ್ಯತೆಯ ಮಠವಾಗಿದ್ದರಿಂದ ಸಕಲ ಧರ್ಮ ದವರು ಪಾಲ್ಗೊಂಡಿದ್ದರು.

ಶ್ರೀಮಠದ ಮಠಾಧಿಶರಾದ ಮೌನೇಶ್ವರಸ್ವಾಮಿಗಳ ಸಾನಿಧ್ಯದಲ್ಲಿ ನೆಡೆದ ಜಾತ್ರೆಯಲ್ಲಿ ಗ್ರಾಮದ ಹಿರಿಯರು ಸುತ್ತಮುತ್ತಲಿನ ಗ್ರಾಮಸ್ಥರು ಮತ್ತು ವಿವಿಧ ಜಿಲ್ಲೆಗಳಿಂದ ಹಾಗೂ ಹೊರ ರಾಜ್ಯಗಳಿಂದ ಭಕ್ತಾಧಿಗಳು ಪಾಲ್ಗೊಂಡಿದ್ದರು, ಜಾತ್ರೆಯುಲ್ಲಿ ಗ್ರಾಮದ ಯುವಕರಿಂದ ಆರತಿಸೇವೆಯುಲ್ಲಿ ಬಾಗವಹಿಸಿದ ಮಹಿಳೆಯುರಿಗೆ ಹಾಗೂ ಭಕ್ತಾದಿಗಳಿಗೆ ತಂಪುಪಾನಿಯ ಶರಭತ್ತನ್ನು ವಿತರಿಸಲಾಯಿತು.

# ಕಠಿಣ ಪೊಲೀಸ್ ಕೆಲಸಕ್ಕೂ ಮಹಿಳೆಯರು ಸೈ: ಬಿ.ದಯಾನಂದ ಅವರು ಮೆಚ್ಚುಗೆ



ಬೆಂಗಳೂರು- ಮಹಿಳಾ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಎಂತಹ ಕಠಿಣ ಕೆಲಸ ನೀಡಿದರೂ ಸಹ ಉತ್ತಮವಾಗಿ ಮಾಡುತ್ತಿದ್ದಾರೆ ಎಂದು ನಗರ

ಪೊಲೀಸ್ ಆಯುಕ್ತ ಬಿ. ದಯಾನಂದ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ವಿಶ್ವ ಮಹಿಳಾ ದಿನಚರಣೆ ಅಂಗವಾಗಿ ಮೈಸೂರು ರಸ್ತೆಯಲ್ಲಿನ ಸಿಎಆರ್ ಕೇಂದ್ರಸ್ಥಾನದಲ್ಲಿ ಇಂದು

ಏರ್ಪಡಿಸಿದ್ದ ವಿಶೇಷ ಮಹಿಳಾ ತುಕಡಿಗಳನ್ನೊಳಗೊಂಡ ಕವಾಯತಿನಲ್ಲಿ ಗೌರವ ವಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಕೆಲವು ವರ್ಷಗಳ ಹಿಂದೆ ಇಲಾಖೆಯಲ್ಲಿ ಪುರುಷ ಅಧಿಕಾರಿ ಹಾಗೂ ಸಿಬ್ಬಂದಿಗಳು ಮಾಡುವಂತಹ ಕೆಲಸ ಕಾರ್ಯಗಳನ್ನ ಮಹಿಳಾ ಅಧಿಕಾರಿ ಹಾಗೂ ಸಿಬ್ಬಂದಿಗಳು ಮಾಡುವುದಿಲ್ಲ ಎಂಬ ಮನೋಭಾವನೆ ಇತ್ತು. ಈಗ ಅದು ಹೋಗಿದೆ ಎಂದು ಅವರು ಹೇಳಿದರು.ಒಂದು ಸರ್ವೇ ಮಾಡಿದಾಗ ತಮಗೂ ಠಾಣಾ ಬರಹಗಾರರು, ತನಿಖಾ ಸಹಾಯಕರು ಇನ್ನೂ ಮುಂತಾದ ಕೆಲಸಗಳನ್ನು ಕೊಡಬೇಕೆಂದು ಮಹಿಳಾ ಸಿಬ್ಬಂದಿಗಳು ತಿಳಿಸಿದ್ದರು.

ಅದರಂತೆಯೇ ಈಗ ಮಹಿಳಾ ಸಿಬ್ಬಂದಿಗಳಿಗೂ ಸಹ ಎಲ್ಲಾ ಕೆಲಸಗಳನ್ನು ನೀಡಲಾಗುತ್ತಿದೆ.

"SATYASHRAYA" Kannada daily Editor, Printer, Publisher & Owned by ANAND SHARANABASAVARAJ. JIGAJINNI, Jigajinni Printing Press Janata Bazar Compound, Bagalkot-587101. Printed at Jigajinni Printing Press Janata Bazaar Compound, Bagalkot-587101. Dist : Bagalkot, Karanataka State.